**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಕುಮಟಾ**

**ಸಿ.ಸಿ.ನಂ. 732/2016**

ಪಿರ್ಯಾದುದಾರರು ಗೋಕರ್ಣ ಪೋಲಿಸ್ ಠಾಣೆ, ಕುಮಟಾ

ವಿರುದ್ಧ

1ನೇ ಆರೋಪಿ ಸುರೇಶ ಮಂಜುನಾಥ ನಾಯ್ಕ
ವಯಸ್ಸುಃ 63 ವರ್ಷ
ವಾಸಃ ಮಂಕಿ ತಾಃ ಹೊನ್ನಾವರ

<u>ದಂ.ಪ್ರ.ಸಂ.ಕಲಂ **313** ರಡಿ ಆರೋಪಿಯ ಹೇಳಿಕೆ</u>

**<u>ಪ್ರಶ್ನೆ</u>** <u>1</u> – ಅಭಿಯೋಜನೆಯ ಪರ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಗಳನ್ನು ಕೇಳಿಸಿಕೊಂಡಿರುವಿರಾ?

**ಉತ್ತರಃ** ಕೇಳಿದ್ದೇನೆ

ಪ್ರಶ್ನೆ **2** – ಅಸಾ 1 ಗಣೇಶ ದೇವಪ್ಪ ನಾಯ್ಕ ಇವರು ತಮ್ಮ ವಿಚಾರಣೆಯಲ್ಲಿ ಫೆಬ್ರುವರಿ 2006 ರಲ್ಲಿ ಕುಮಟಾ ತಾಲೂಕ ಪಂಚಾಯತಿಯಲ್ಲಿ ಪೋಲಿಸರು ಬಂದು ಹನೇಹಳ್ಳಿ ಸೊಸೈಟಿಗೆ ಸಂಬಂಧಿಸಿದಂತೆ ಕೆಲವು ರಜಿಸ್ಟರಗಳನ್ನು ಕಚೇರಿಯಿಂದ ಪಡೆದುಕೊಳ್ಳುತ್ತಿದ್ದು, ಅಲ್ಲಿ ಅವರ ಸಹಿ ಪಡೆದುಕೊಂಡಿರುವುದಾಗಿ, ನಂತರ ಪೋಲಿಸರು ಅವರನ್ನು ಕುಮಟಾ ಸಿಂಡಿಕೇಟ್ ಬ್ಯಾಂಕಿಗೆ ಬರುವಂತೆ ಕರೆದಿದ್ದು ಅಲ್ಲಿ ಅವರು ಒಂದು ಚೆಕನ್ನು ತೋರಿಸಿ ಅದನ್ನು ವಶಪಡಿಸಿಕೊಂಡಿರುವುದಾಗಿ, ಸದ್ರಿ ಚೆಕ್ಕನಲ್ಲಿ 13 ಲಕ್ಷ ಮೊತ್ತವನ್ನು 2004 ನೇ ಇಸ್ವಿಯಲ್ಲಿ ಬರೆದಿದ್ದು ಸೊಸೈಟಿಯ ಮೊಹರನ್ನು ಸಹ ಅದಕ್ಕೆ ಲಗತ್ತಾಗಿರುವುದಾಗಿ, ಪೋಲಿಸರು ಮಧ್ಯಾಹ್ನದ ವೇಳೆಗೆ ಬರವಣಿಗೆ ಮಾಡಿ ಅವರ ಸಹಿ ಪಡೆದುಕೊಂಡಿದ್ದು, ನಿಪಿ1 ಮತ್ತು 2 ಜಪ್ತು ಪಂಚನಾಮೆಯನ್ನು ಹಾಗೂ ಅದರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿ, ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ **3** – ಅಸಾ 2 ತಿಮ್ಮು ನಾರಾಯಣ ಮುಕ್ರಿ ಇವರು ತಮ್ಮ ವಿಚಾರಣೆಯಲ್ಲಿ ದಿಃ 3.2.2006 ರಂದು ಕುಮಟಾ ತಾಲೂಕು ಪಂಚಾಯತಿಗೆ ಅವರು ಹೋದಂತಹ ಸಮಯದಲ್ಲಿ ಪೋಲಿಸರು ಅಲ್ಲಿಗೆ ಬಂದಿದ್ದು, ಅಲ್ಲಿ ಪಂಚನಾಮೆಯ ಕ್ರಮ ಜರುಗಿಸುತ್ತಿದ್ದು, ಹನೇಹಳ್ಳಿ ಸೊಸೈಟಿಗೆ ಸಂಬಂಧಸಿದಂತೆ ದಾಖಲಾತಿಗಳನ್ನು ಜಪ್ತು ಮಾಡಿ ಪಂಚನಾಮೆಗೆ ಅವರ ಸಹಿಯನ್ನು ಪಡೆದುಕೊಂಡಿರುವುದಾಗಿ, ಅದೇ ದಿನ ಮಧ್ಯಾಹ್ನದ ವೇಳೆ ಪೋಲಿಸರು ಅವರನ್ನು ಕುಮಟಾ ಸಿಂಡಿಕೇಟ್ ಬ್ಯಾಂಕಗೆ ಕರೆದುಕೊಂಡು ಹೋಗಿ ಅಲ್ಲಿ ಪತ್ರದ ಅನುಸಾರವಾಗಿ ಬ್ಯಾಂಕಿನ ವ್ಯವಸ್ಥಾಪಕರು ಒಂದು ಚೆಕ್ಕನ್ನು ಹಾಜರುಪಡಿಸಿದ್ದು, ಸದ್ರಿ ಚೆಕ್ಕನಲ್ಲಿ ಹನೇಹಳ್ಳಿ ವ್ಯವಸಾಯ ಸೇವಾ ಸಹಕಾರಿ ಸಂಘದ ಒಂದು ಮೊಹರು ಇದ್ದುದ್ದಾಗಿ, ತಾಃ 7.7.2004 ಹಾಗೂ ಹಣದ ಮೊತ್ತ 13 ಲಕ್ಷ ಎಂದು ನಮೂದು ಇದ್ದ ಚೆಕ್ಕನ್ನು ಪೋಲಿಸರು ವಶಪಡಿಸಿಕೊಂಡಿದ್ದು, ಅಲ್ಲಿ ಬರೆದಂತಹ ಮಹಜರಗೆ ಅವರು ಸಹಿ ಮಾಡಿರುವುದಾಗಿ, ನಿಪಿ 2 ಮಹಜರ್ ಹಾಗೂ ಅದರಲ್ಲಿರುವ ತಮ್ಮ ಸಹಿಯನ್ನು

ಹಾಗೂ ನಿಪಿ 3 ಚೆಕ್ಕನ್ನು ನೋಡಿ ಗುರುತಿಸಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ **4** – ಅಸಾ 3 ರವಿ ಸಿ ಎ ಇವರು ತಮ್ಮ ವಿಚಾರಣೆಯಲ್ಲಿ ದಿಃ 1.2.2006 ರಂದು ಫಿರ್ಯಾದಿ - ಆರ್ ಎನ್ ನಾಯ್ಕ ಇವರು ನೀಡಿದ ದೂರನ್ನು ಸ್ವೀಕರಿಸಿ ಗುನ್ನೆ ದಾಖಲಿಸಿಕೊಂಡು ಪ್ರಥಮ ವರ್ತಮಾನ ವರದಿಯನ್ನು ನ್ಯಾಯಾಲಯಕ್ಕೆ ಕಳುಹಿಸಿ, ದಿಃ 3.2.2006 ರಂದು ಕುಮಟಾ ತಾಲೂಕು ಪಂಚಾಯತಿ ಕಚೇರಿಗೆ ಭೇಟಿ ನೀಡಿ ಪಂಚನಾಮೆಯಲ್ಲಿ ಕಾಣಿಸಿರುವ ಕ್ರಮ ಸಂಖ್ಯೆ 2 ರಿಂದ 10ರ ದಾಖಲಾತಿಗಳನ್ನು ವಶಪಡಿಸಿಕೊಂಡು ಪಂಚನಾಮೆಯನ್ನು ಬರೆದಿರುವುದಾಗಿ, ದೂರನ್ನು, ಪ್ರಥಮ ವರ್ತಮಾನ ವರದಿಯನ್ನು, ಹಾಗೂ ಅವುಗಳಲ್ಲಿರುವ ತಮ್ಮ ಸಹಿಯನ್ನು, ನಿಪಿ 1 ಪಂಚನಾಮೆಯಲ್ಲಿನ ಅವರ ಸಹಿಯನ್ನು, ನಿಪಿ 6 ದಾಖಲಾತಿ ಪಟ್ಟಿಯ ಪತ್ರವನ್ನು, ನಿಪಿ7 ಸ್ವರ್ಣಜಯಂತಿ ಗ್ರಾಮ ಸ್ವರೋಜಗಾರ ಯೋಜನೆಯಡಿಯಲ್ಲಿ ಸಂದಾಯಕ್ಕಾಗಿ ಬಿಡುಗಡೆಯಾದ ಮಾಹಿತಿ ಪತ್ರವನ್ನು, ದಿಃ 7.7.2004 ರ ತಾಲೂಕು ಪಂಚಾಯತ ಕಚೇರಿಯ ನಿವೇದನಾ ಪತ್ರವನ್ನು, ಸಹಾಯಧನ ಬಟಾವಡೆಯ ಕುರಿತು 3 ನಮೂನೆ ಫಾರ್ಮುಗಳನ್ನು, ಪತ್ರವನ್ನು, ಚೆಕ್ಕನ ಯಥಾ ನಕಲನ್ನು, ಚೆಕ್ಕನ ಕೌಂಟರ್ ಫೈಲನ್ನು, ಪತ್ರಗಳನ್ನು, ನೋಡಿ ಗುರುತಿಸಿ, ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ **5** – ಅಸಾ 3 ರವರು ಮುಂದುವರಿದು ತಮ್ಮ ವಿಚಾರಣೆಯಲ್ಲಿ ಅದೇ ದಿನ ಕುಮಟಾದ ಸಿಂಡಿಕೇಟ್ ಬ್ಯಾಂಕಗೆ ಹೋಗಿ ಸದ್ರಿ ಪ್ರಕರಣಕ್ಕೆ ಸಂಬಂಧಿಸಿದ ಚೆಕ್ ಸಂಖ್ಯೆ 756368 ರ ಚೆಕ್ ನ ಮೂಲ ಪ್ರತಿಯನ್ನು ನಿಪಿ 3 ಪಂಚನಾಮೆಯ ಮೂಲಕ ಅಮಾನತ್ತು ಪಡಿಸಿಕೊಂಡು, ಸಿಂಡಿಕೇಟ್ ಬ್ಯಾಂಕ ಕುಮಟಾದ ವ್ಯವಸ್ಥಾಪಕಾರಾದ ಲಕ್ಷ್ಮೀನಾರಾಯಣ ನಾಯ್ಕ ಇವರನ್ನು ವಿಚಾರಣೆ ಮಾಡಿ ಅವರ ಹೇಳಿಕೆಯನ್ನು ಪಡೆದುಕೊಂಡಿರುವುದಾಗಿ, ದಿಃ 13.2.2006 ರಂದು ಕುಮಟಾ ತಾಲೂಕು ಪಂಚಾಯತಿಗೆ ಸ್ವಸಹಾಯ ಸಂಘಗಳಿಗೆ ಸಹಾಯಧನ ಮಂಜೂರು ಮಾಡುವ ಬಗ್ಗೆ, ಅಧಿಕಾರಿಗಳ ಪಾತ್ರವೇನು ಎಂಬ ಬಗ್ಗೆ, ವರದಿ ನೀಡುವಂತೆ ಪತ್ರ ಬರೆದಿದ್ದು, ದಿಃ 24.3.2006 ರಂದು ಕುಮಟಾ ಸಿಂಡಿಕೇಟ್ ಬ್ಯಾಂಕಗೆ ವಿ ಎಸ್ ಎಸ್ ಬ್ಯಾಂಕನ ಹೆಸರಿಗೆ ನೀಡಿದ ಚೆಕ್ಕನ್ನು ಸುರೇಶ ಎಂ ನಾಯ್ಕರವರ ಹೆಸರಿಗೆ ಯಾವ ರೀತಿಯಲ್ಲಿ ನಗದೀಕರಿಸಲಾಗಿದೆ ಎಂಬ ಬಗ್ಗೆ, ಸಂಪೂರ್ಣ ಮಾಹಿತಿಯನ್ನು ಕೊಡುವಂತೆ ಪತ್ರವನ್ನು ಬರೆದಿದ್ದು, ಅದಕ್ಕೆ ಅವರು ದಿಃ 24.3.2006 ರಂದು ಉತ್ತರವನ್ನು ಕೊಟ್ಟಿದ್ದು, ಸದ್ರಿ ಉತ್ತರವನ್ನು ಹಾಗೂ ಅದರಲ್ಲಿರುವ ತಮ್ಮ ಸಹಿಯನ್ನು, ನಿಪಿ 2 ಪಂಚನಾಯಲ್ಲಿನ ಅವರ ಸಹಿಯನ್ನು ನೋಡಿ ಗುರುತಿಸಿ, ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ **6** – ಅಸಾ 3 ರವರು ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ ದಿಃ 12..2006 ರಂದು ತಾಲೂಕು ಕಾರ್ಯನಿರ್ವಹಣಾ ಅಧಿಕಾರಿಗಳು ತಾಲೂಕು ಪಂಚಾಯತ ಕುಮಟಾ ಇವರಿಗೆ ದಿಃ 7.2.2004 ರಂದು ಎಸ್ ಜೆ ಎಸ್ ವಾಯ್ ಫಲಾನುಭವಿಗಳ ಸಹಾಯಧನ ಮಂಜೂರಿ ಕುರಿತ ಆದೇಶಕ್ಕಾಗಿ ನಿವೇದನೆ ಸಲ್ಲಿಸಿದೆ ಎಂದು ಇದ್ದಂತಹ ವರದಿಯಲ್ಲಿ 13 ಲಕ್ಷ ರೂ.ಮಂಜೂರಾತಿ ಮಾಡಬೇಕಾಗಿದ್ದಲ್ಲಿ ಸಂಬಂಧಪಟ್ಟಂತಹ ಅಧಿಕಾರಿಗಳ ಪಾತ್ರ ಏನು ಎಂದು ಸ್ಪಷ್ಟನೆಯನ್ನು ಕೇಳಿ ಪತ್ರವನ್ನು ಬರೆದಿದ್ದು, ಅದಕ್ಕೆ ಅವರು ದಿಃ 25.3.2006 ರಂದು 13 ಲಕ್ಷ ರೂ. ದರುಪಯೋಗದ ಸ್ಪಷ್ಟೀಕರಣ ಸಲುವಾಗಿ

ತಮ್ಮ ಸಹಿಯನ್ನು ನೋಡಿ ಗುರುತಿಸಿ,ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ **7** – ಅಸಾ 3 ರವರು ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ ದಿಃ 17.3.2006 ರಂದು ಪುನಃ ತಾಲೂಕು ಪಂಚಾಯತ ಕುಮಟಾ ಇವರಿಗೆ ಸ್ಪಷ್ಟೀಕರಣ ನೀಡುವಂತೆ ಪತ್ರ ವ್ಯವಹಾರ ಮಾಡಿದ್ದು, ದಿಃ 22.3.2006 ರಂದು ಜಿಲ್ಲಾ ಪಂಚಾಯತ ಕಾರ್ಯಾಲಯ ಕಾರವಾರ ಇವರಿಗೆ ಸ್ಪಷ್ಟನೆಯ ಮಾಹಿತಿಯನ್ನು ಕೇಳಿ ನೀಡಿರುವಂತಹ ಪತ್ರಕ್ಕೆ ಮಾಹಿತಿ ನೀಡುವಂತೆ ನಿರ್ದೇಶನ ನೀಡಲು ಮನವಿ ಮಾಡಿಕೊಂಡಿದ್ದು, ದಿಃ 25.3.20016 ರಂದು ತಾಲೂಕು ಪಂಚಾಯತ ಕುಮಟಾದಿಂದ 13 ಲಕ್ಷ ರೂ. ಹಣ ದುರುಪಯೋಗಕ್ಕೆ ಸಂಬಂಧಿಸಿದಂತೆ ಮಾಹಿತಿಯನ್ನು ಹಾಗೂ ದಿ 12.4.2006 ರಂದು ಜಿಲ್ಲಾ ಪಂಚಾಯತ ಕಾರವಾರ ಇವರಿಂದ ಮಾಹಿತಿಯನ್ನು ಪಡೆದುಕೊಂಡಿರುವುದಾಗಿ, ನಿಪಿ 19 ರಲ್ಲಿಯ ಅವರ ಸಹಿಯನ್ನು ನೋಡಿ ಗುರುತಿಸಿ, ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ **8** – ಅಸಾ 3 ರವರು ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ ದಿಃ 20.4.2006 ರಂದು ಸಹಾಯಕ ನಿಬಂಧಕರು ಸಹಕಾರಿ ಸಂಘಗಳು ಕುಮಟಾ ಹಾಗೂ ಲೆಕ್ಕ ಪರಿಶೋಧನಾ ವರದಿ ಹಾಗೂ ವಿಚಾರಣಾ ವರದಿಯನ್ನು ನೀಡುವಂತೆ ಮನವಿ ಪತ್ರವನ್ನು ಹಾಗೂ ತಾಲೂಕು ಕಾರ್ಯ ನಿರ್ವಹಣಾ ಅಧಿಕಾರಿಗಳು ಕುಮಟಾ ರವರಿಗೆ 13 ಲಕ್ಷ ರೂ ಹಣ ದುರುಪಯೋಗಕ್ಕೆ ಸಂಬಂಧಿಸಿದಂತೆ ಮೂಲದಾಖಲಾತಿಗಳನ್ನು ಒದಗಿಸುವಂತೆ ಮನವಿ ಪತ್ರವನ್ನು ಬರೆದಿದ್ದಾಗಿ, ದಿಃ 20.4.2006 ರಂದು ಸಿಂಡಿಕೇಟ್ ಬ್ಯಾಂಕ ಕುಮಟಾದ ಸೀನಿಯರ್ ವಿ ಎಸ್ ಕಾಮತ ರವರಿಗೆ ನೋಟಿಸು ಜ್ಯಾರಿ ಮಾಡಿದ್ದು, ದಿಃ21.4.2006 ರಂದು ಸಿ ಓ ಜೆಡ್ ಪಿ ಕಾರವಾರ ಇವರಿಗೆ 2004-05 ನೇ ಸಾಲಿನ ಆಡಿಟ್ ರಿಪೋರ್ಟನ್ನು ಹಾಜರು ಪಡಿಸುವಂತೆ ಮನವಿ ಮಾಡಿಕೊಂಡಿದ್ದು, 2ನೇ ಆರೋಪಿಯಾದ ನಿಮಗೆ ಸ್ವಸಹಾಯ ಸಂಘಗಳಿಗೆ ಸಬ್ಸಿಡಿ ಹಣ ಬಿಡುಗಡೆಗೆ ಸಂಬಂಧಿಸಿದಂತೆ ಸ್ಪಷ್ಟೀಕರಣ ನೀಡುವಂತೆ ನೋಟಿಸು ಕೊಟ್ಟಿದ್ದು, ದಿಃ 21.4.2006 ರಂದು ತಾಲೂಕು ಪಂಚಾಯತ ಕಾರ್ಯನಿರ್ವಹಣಾಧಿಕಾರಿ ಕುಮಟಾರವರಿಗೆ 2ನೇ ಆರೋಪಿಯಾದ ನೀವು ಸದ್ರಿ ಕಚೇರಿಯಲ್ಲಿ ಕೆಲಸ ಮಾಡುತ್ತಿದ್ದ ಸಲುವಾಗಿ ಮಾಹಿತಿ ನೀಡುವಂತೆ ಪತ್ರ ಬರೆದಿದ್ದು, ಅದೇ ದಿನ ವಿ ಎಸ್ ಎಸ್ ಬ್ಯಾಂಕ ಹನೇಹಳ್ಳಿಗೆ ಪತ್ರ ಬರೆದು 15 ಸ್ವ ಸಹಾಯ ಸಂಘಗಳ ಅಸ್ತಿತ್ವದ ಬಗ್ಗೆ ಹಾಗೂ ಅವುಗಳಿಗೆ ಸಬ್ಸಿಡಿ ಹಣ ಬಿಡುಗಡೆಯಾದ ಸಲುವಾಗಿ ಮಾಹಿತಿ ನೀಡುವಂತೆ ಪತ್ರ ಬರೆದಿದ್ದು, 4ನೇ ಆರೋಪಿಯಾದ ನಿಮಗೆ 13 ಲಕ್ಷ ರೂ. ಬಿಡುಗಡೆಗೆ ಸಂಬಂಧಿಸಿದಂತೆ ನಿಮ್ಮ ಪಾತ್ರ ಏನು ಹಾಗೂ ಚೆಕ್ಕನಲ್ಲಿ ಇರುವಂತ ಸಹಿ ನಿಮ್ಮದೋ ಹೌದೋ ಅಲ್ಲವೋ ಎಂಬ ಬಗ್ಗೆ ಸ್ಪಷ್ಟನೆ ನೀಡಲು ನೋಟಿಸು ನೀಡಿರುವುದಾಗಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ **9** – ಅಸಾ 3 ರವರು ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ ದಿಃ 22.4.2006 ರಂದು ಕಾರ್ಯದರ್ಶಿಗಳು ತೊರ್ಕೆ ಗ್ರಾಮ ಪಂಚಾಯತ ಹನೇಹಳ್ಳಿ, ಕಾರ್ಯದರ್ಶಿ, ನಾಡುಮಾಸ್ಕೇರಿ ಕಾರ್ಯದರ್ಶಿಯವರ ವ್ಯಾಪ್ತಿಯಲ್ಲಿ ಸದ್ರಿ ಪ್ರಕರಣಕ್ಕೆ ಸಂಬಂಧಿಸಿದಂತೆ 13 ಲಕ್ಷ ರೂ. ಮಂಜೂರಾಗಿರುವಂತಹ ಸ್ವಸಹಾಯ ಸಂಘಗಳು ಅಸ್ತಿತ್ವದಲ್ಲಿ ಇದೆಯೋ ಇಲ್ಲವೋ ಎಂಬ ಬಗ್ಗೆ ಮಾಹಿತಿ ನೀಡುವಂತೆ ಪತ್ರ ಬರೆದಿದ್ದು, ಸಹಾಯಕ ನಿರ್ದೇಶಕರು ಮೀನುಗಾರಿಕೆ ಇಲಾಖೆ ಕುಮಟಾ ಸಹಾಯಕ ನಿರ್ದೇಶಕರು ತೋಟಗಾರಿಕೆ ಇಲಾಖೆ ಕುಮಟಾ ರವರಿಗೆ ಸ್ವಸಹಾಯ ಸಂಘಗಳಿಗೆ ಸಬ್ಸಿಡಿ ಮಂಜೂರಾತಿ ಮಾಡುವ ಸಲುವಾಗಿ ಗ್ರೇಡಿಂಗ್ ಮಾಡುವ ಸಮಯದಲ್ಲಿ

ನಿರ್ದೇಶಕರು ತೋಟಗಾರಿಕೆ ಇಲಾಖೆ ಕುಮಟಾ ರವರಿಗೆ ಸ್ವಸಹಾಯ ಸಂಘಗಳಿಗೆ ಸಬ್ಸಿಡಿ ಮಂಜೂರಾತಿ ಮಾಡುವ ಸಲುವಾಗಿ ಗ್ರೇಡಿಂಗ್ ಮಾಡುವ ಸಮಯದಲ್ಲಿ ಪ್ರಾಜೆಕ್ಟ ರಿಪೋರ್ಟ ತಯಾರಿಸಿ ಕೊಟ್ಟ ಬಗ್ಗೆ ಹಾಗೂ ರಿಪೋರ್ಟ ತಯಾರಿಸಿಕೊಡವಂತೆ ಕುಮಟಾ ತಾಲೂಕು ಪಂಚಾಯತಿಯಿಂದ ಯಾವುದಾದರು ಮನವಿ ಬಂದಿದೆಯಾ ಎಂಬ ಬಗ್ಗೆ ವಿವರಣೆ ಕೊಡಲು ಕೇಳಿಕೊಂಡಿದ್ದು, ದಿಃ 24.4.2006 ರಂದು ಸಹಾಯಕ ನಿರ್ದೇಶಕರು ಮೀನುಗಾರಿಕೆ ಕುಮಟಾ ಇವರು ಹಣ ಬಿಡುಗಡೆಯ ಸಮಯದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಈಶ್ವರ ಜಿ ಹರಿಕಂತ್ರ ಇವರು ಹಾಜರಾಗಿ ಮಾಹಿತಿ ನೀಡುವಂತೆ ನೋಟಿಸು ಕೊಟ್ಟಿರುವುದಾಗಿ ಲಿಖಿತ ಮೂಲಕ ತಿಳಿಸಿರುವುದಾಗಿ, ತಾಲೂಕು ಪಂಚಾಯತ ಕುಮಟಾರವರು ಮನವಿ ಪತ್ರಕ್ಕೆ ಮಾಹಿತಿ ನೀಡಿ ಪತ್ರ ವ್ಯವಹಾರ ಮಾಡಿರುವುದಾಗಿ, ದಿಃ 22.4.2006 ರಂದು 2ನೇ ಆರೋಪಿಯಾದ ನಿಮ್ಮನ್ನು ದಸ್ತಗಿರಿ ಮಾಡಿ ನ್ಯಾಯಾಲಯಕ್ಕೆ ಹಾಜರುಡಿಸಿದ್ದು, ದಿಃ 24.4.2006 ರಂದು 2ನೇ ಆರೋಪಿಯಾದ ನಿಮ್ಮನ್ನು ದಸ್ತಗಿರಿ ಮಾಡಿದ ಮಾಹಿತಿಯನ್ನು ಕ್ಷೇತ್ರ ಶಿಕ್ಷಣಾಧಿಕಾರಿಯವರಿಗೆ ಹಾಗೂ ಕಾರ್ಯ ನಿರ್ವಹಣಾಧಿಕಾರಿ ಕುಮಟಾರವರಿಗೆ ನೀಡಿರುವುದಾಗಿ, ನಿಪಿ 20 ಪತ್ರವನ್ನು, ನಿಪಿ 21 ಮಾಹಿತಿ ಪತ್ರವನ್ನು ಹಾಗೂ ಅದರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ **10** – ಅಸಾ 3 ರವರು ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ ದಿಃ 26.4.2006 ರಂದು ಹಿರಿಯ ಸಹಾಯಕ ತೋಟಗಾರಿಕಾ ನಿರ್ದೇಶಕರು ಜಿಲ್ಲಾ ಪಂಚಾಯತ ಕುಮಟಾರವರು ತಮಗೆ ಯಾವುದೇ ಸ್ವಸಹಾಯ ಸಂಘಗಳ ಸಲುವಾಗಿ ಪ್ರಾಜೆಕ್ಟ ರಿಪೋರ್ಟ ತಯಾರಿಸಿಕೊಡುವಂತೆ ಮನವಿ ಬಂದಿರುವುದಿಲ್ಲವೆಂದು ಮಾಹಿತಿಯನ್ನು ನೀಡಿರುವುದಾಗಿ, ಸದ್ರಿ ಮಾಹಿತಿ ಪತ್ರದಲ್ಲಿ ಹಿಂದೆ ತಯಾರಿಸುವಂತಹ ಪ್ರಾಜೆಕ್ಟ ರಿಪೋರ್ಟನಲ್ಲಿ ಬದಲಾವಣೆಗಳನ್ನು ಮಾಡಿ ಸ್ಪಷ್ಟನೆಯ ಪ್ರಾಜೆಕ್ಟ ರಿಪೋರ್ಟನ್ನು ಸದಸ್ಯರ ಹೆಸರು ಮತ್ತು ಸಂಖ್ಯೆಯಲ್ಲಿ ಹೆಸರುಗಳನ್ನು ಬರೆದಕೊಂಡು ಪುನಃ ಜೆರಾಕ್ಸ ಮಾಡಿಸಿಕೊಂಡು ಸಂಬಂಧಿಸಿದ ಸಂಘದ ಹೆಸರಿನಲ್ಲಿ ಸದ್ರಿ ಪ್ರಾಜೆಕ್ಟ ರಿಪೋರ್ಟನ್ನು ಜೋಡಿಸಿರುವುದು ಕಂಡು ಬರುತ್ತದೆ ಎಂದು ತಮ್ಮ ವರದಿಯಲ್ಲಿ ಹೇಳಿಕೊಂಡಿರುವುದಾಗಿ, ನಿಪಿ 22 ಮಾಹಿತಿಯ ವರದಿಯನ್ನು ಹಾಗೂ ಅದರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ **11** – ಅಸಾ 3 ರವರು ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ ತಾಲೂಕು ಪಂಚಾಯತ ಕುಮಟಾ ರವರಿಗೆ ಮನವಿ ಬರೆದು 15 ಸ್ವಸಹಾಯ ಸಂಘಗಳ ಸಬ್ಸಿಡಿ ಹಣಕ್ಕೆ ಸಂಬಂಧಿಸಿದಂತೆ ಪ್ರಾಜೆಕ್ಟ ರಿಪೋರ್ಟ ನ್ನು ನೀಡುವಂತೆ ಮೀನುಗಾರಿಕಾ ಮತ್ತು ತೋಟಗಾರಿಕಾ ಇಲಾಖೆಯವರಿಗೆ ಕೋರಿಕೆ ಪತ್ರ ನೀಡಲಾಗಿದೆಯಾ ಎಂಬ ಬಗ್ಗೆ ಮಾಹಿತಿ ನೀಡುವಂತೆ ಕೇಳಿಕೊಂಡಿದ್ದು, ದಿಃ 25.4.2006 ರಂದು ಲೆಕ್ಕ ಅಧೀಕ್ಷಕರು, ತಾಲೂಕು ಪಂಚಾಯತ ಕಮಟಾ ರವರಿಗೆ ಅಂದರೆ 4ನೇ ಆರೋಪಿಯಾದ ನಿಮಗೆ ಎಸ್ ಜಿ ಎಸ್ ವಾಯ್ ಯೋಜನೆಯಡಿಯಲ್ಲಿ ಗುಂಪುಗಳಿಗೆ ಸಹಾಯಧನ ಮಂಜೂರು ಮಾಡಲು ಸಲ್ಲಿಸಿದ ಪ್ರಸ್ತಾವನೆಯ ವರದಿಯ ಹಿಂಭಾಗದಲ್ಲಿ ಇರುವಂತ ಶರಾ ಮತ್ತು ಸಹಿಯ ಬಗ್ಗೆ ಸ್ಪಷ್ಟನೆಯ ಬಗ್ಗೆ ಮಾಹಿತಿಯನ್ನು ಕೋರಿದ್ದು ಅದಕ್ಕೆ 4ನೇ ಆರೋಪಿಯಾದ ನೀವು ನೀವೇ ಬರೆದಂತ ಶರಾ ಮತ್ತು ಸಹಿ ನಿಮ್ಮದೇ ಆಗಿರುತ್ತದೆ ಎಂದು ದಿಃ 25.4.2006 ರಂದು ಲಿಖಿತ ವರದಿ ನೀಡಿದ್ದು, ನಿಪಿ 23

ವರದಿಯನ್ನು ಹಾಗೂ ಅದರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ **12 –** ಅಸಾ 3 ರವರು ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ ಅದೇ ದಿನ ನಾಡುಮಾಸ್ಕೇರಿ ಗ್ರಾಮ ಪಂಚಾಯತಿಯಿಂದ ಮಾಹಿತಿ ಪತ್ರ ಬಂದಿದ್ದು, ತಮ್ಮ ವ್ಯಾಪ್ತಿಯಲ್ಲಿ ಬರುವಂತ 8 ಸ್ವ ಸಹಾಯ ಸಂಘಗಳ ಬಗ್ಗೆ ಮಾಹಿತಿ ನೀಡಿ ಅದರಲ್ಲಿ ಕಾಣಿಸಿದಂತ ಕ್ರ ಸಂಖ್ಯೆ 5 ರ ಓಂಕಾರ ಸ್ವಸಹಾಯ ಸಂಘ ದುಬ್ಬನಶಶಿ ಸಂಘವು ಅಸ್ತಿತ್ವದಲ್ಲಿ ಇಲ್ಲ ಎಂದು ಹೇಳಿಕೊಂಡಿದ್ದು ಉಳಿದ ಸ್ವಸಹಾಯ ಸಂಘಗಳಿಗೆ ಸಹಾಯಧನ ಬೇಕು ಎಂದು ತಾವು ವಿ ಎಸ್ ಎಸ್ ಬ್ಯಾಂಕ ಹನೇಹಳ್ಳಿಗೆ ಯಾವುದೇ ಪತ್ರ ವ್ಯವಹಾರ ಮಾಡಿರುವುದಿಲ್ಲ ಎಂದು ಲಿಖಿತ ಮಾಹಿತಿ ನೀಡಿರುವುದಾಗಿ, ಅದೇದಿನ ಬಂಕಿಕೊಡ್ಲ ಗ್ರಾಮ ಪಂಚಾಯತಿಯವರು 4 ಸ್ವ ಸಹಾಯ ಸಂಘಗಳಲ್ಲಿ ರೈತ ಬೆಳೆಯ ಸ್ವಸಹಾಯ ಸಂಘ ಎಂಬುವುದು ತೊರ್ಕೆ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಬರುತ್ತದೆ ಎಂದು, ಉಳಿದ 3 ಸ್ವ ಸಹಾಯ ಸಂಘಗಳು ತಮ್ಮ ಪಂಚಾಯತ ವ್ಯಾಪ್ತಿಯಲ್ಲಿ ಅಸ್ತಿತ್ವದಲ್ಲಿ ಇಲ್ಲಾ ಎಂದು ಮಾಹಿತಿಯ ವರದಿಯನ್ನು ನೀಡಿದ್ದು, ನಿಪಿ 24 , 25 ರ ಸದ್ರಿ ಮಾಹಿತಿಯ ವರದಿಯನ್ನು ಹಾಗೂ ಅದರಲ್ಲಿರುವ ತಮ್ಮ ಸಹಿಯನ್ನು, ನೋಡಿ ಗುರುತಿಸಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ **13 –** ಅಸಾ 3 ರವರು ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ ವಿ ಎಸ್ ಎಸ್ ಬ್ಯಾಂಕ ಹನೇಹಳ್ಳಿಯಿಂದ ಬಂದ ಲಿಖಿತ ಪತ್ರದಲ್ಲಿ 15 ಸ್ವ ಸಹಾಯ ಸಂಘಗಳು ಮಾತ್ರ ತಮ್ಮ ಬ್ಯಾಂಕಿನಲ್ಲಿ ಅಸ್ತಿತ್ವದಲ್ಲಿದ್ದು ಉಳಿದ ಸ್ವ ಸಹಾಯ ಸಂಘಗಳು ಅಸ್ತಿತ್ವದಲ್ಲಿ ಇರುವುದಿಲ್ಲ ಎಂದು ಲಿಖಿತ ಮಾಹಿತಿಯನ್ನು ನೀಡಿದ್ದು, ಸದ್ರಿ 3 ಸ್ವ ಸಹಾಯ ಸಂಘಗಳು ತಮ್ಮ ಬ್ಯಾಂಕಿನಲ್ಲಿ ಉಳಿತಾಯ ಖಾತೆಯನ್ನು ಮಾತ್ರ ಹೊಂದಿದ್ದು ಸದ್ರಿ ಸ್ವ ಸಹಾಯ ಸಂಘಗಳಿಗೆ ಕುಮಟಾ ತಾಲೂಕು ಪಂಚಾಯತಿಯಿಂದ ಯಾವುದೇ ಸಹಾಯಧನ ಮಂಜೂರಾಗಿರುವುದಿಲ್ಲ ಎಂದು ಮಾಹಿತಿ ನೀಡಿರುವುದಾಗಿ, ಸದ್ರಿ ವರದಿಯನ್ನು ಹಾಗೂ ಅದರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ **14 –** ಅಸಾ 3 ರವರು ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ ದಿಃ 25.4.2006 ರಂದು ಮೀನುಗಾರಿಕಾ ಸಹಾಯಕ ನಿರ್ದೇಶಕರಾದ ಈಶ್ವರ ಗಣಪು ಹರಿಕಂತ್ರ ರವರನ್ನು ವಿಚಾರಣೆ ಮಾಡಿ ಪಡೆದುಕೊಂಡ ಹೇಳಿಕೆಯಲ್ಲಿ ಅವರು 2004-2005 ರ ಅವಧಿಗೆ ತಾನು ಯಾವುದೇ ಪ್ರಾಜೆಕ್ಟ ರಿಪೋರ್ಟನ್ನು ತಯಾರಿಸಿಕೊಟ್ಟಿಲ್ಲ ಹಾಗೂ ಪ್ರಾಜೆಕ್ಟ ತಯಾರಿಸಿಕೊಡುವಂತೆ ತಾಲೂಕು ಪಂಚಾಯತ ಕುಮಟಾದಿಂದ ಮನವಿ ಸಹ ಬಂದಿರುವುದಿಲ್ಲ ಎಂದು ಹೇಳಿಕೊಂಡಿರುವುದಾಗಿ, ದಿಃ 26.4.2006 ರಂದು ಬಿ ಇ ಓ ಕುಮಟಾ ರವರಿಗೆ ಮನವಿ ಪತ್ರ ಬರೆದು ಗಜಾನನ ಅನಂತ ಶೆಟ್ಟಿಯವರು ತಾಲೂಕು ಪಂಚಾಯತಿಯಲ್ಲಿ ಯಾವ ದಿನಾಂಕದಿಂದ ಕರ್ತವ್ಯ ನಿರ್ವಹಿಸುತಿದ್ದಾರೆ ಎಂಬ ಬಗ್ಗೆ ಮಾಹಿತಿ ನೀಡುವಂತೆ ಕೇಳಿಕೊಂಡ ಮೇರೆಗೆ ಅವರು ದಿಃ 20.11.2000 ರಿಂದ ಅಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ ಎಂಬ ಬಗ್ಗೆ ದಿಃ 2.5.2006 ರಂದು ವರದಿ ಪಡೆದುಕೊಂಡಿದ್ದು, ಸದ್ರಿ ವರದಿಯ ಜೊತೆ ಅವರ ನೇಮಕಾತಿಯ ಆದೇಶದ ಪ್ರತಿಯನ್ನು ಲಗತ್ತಿಸಿ ನೀಡಿರುವುದಾಗಿ, ಸದ್ರಿ ಮಾಹಿತಿ ಪತ್ರವನ್ನು, ನೇಮಕಾತಿ ಆದೇಶದ ಪತ್ರವನ್ನು, ಹಾಗೂ ಅದರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ **15 –** ಅಸಾ 3 ರವರು ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ ದಿಃ 2.5.2006 ರಂದು ಸಿಂಡಿಕೇಟ್ ಬ್ಯಾಂಕನ ವ್ಯವಸ್ಥಾಪಕರಾದ ವಿ ಎಸ್ ಕಾಮತ್ ರವರನ್ನು ವಿಚಾರಣೆ ಮಾಡಿ ಹೇಳಿಕೆ ಪಡೆದುಕೊಂಡಿದ್ದು, ದಿಃ 16.5.2006 ರಂದು ಕಾರ್ಯ ನಿರ್ವಾಹಣಾಧಿಕಾರಿ ಕುಮಟಾರವರಿಗೆ 15 ಸ್ವಸಹಾಯ ಸಂಘಗಳಿಗೆ ಬಿಡುಗಡೆಯಾದಂತಹ 13 ಲಕ್ಷ ರೂ. ಗೆ ಸಂಬಂಧಿಸಿದಂತೆ ಹೆಚ್ಚಿನ ಮಾಹಿತಿ ನೀಡುವಂತೆ ಮನವಿ ಪತ್ರ ನೀಡಿದ ಮೇರೆಗೆ ದಿಃ 23.5.2006 ರಂದು ವರದಿ ನೀಡಿರುವುದಾಗಿ, ಅವರು ತಮ್ಮ ವರದಿಯಲ್ಲಿ ಅಸಲು ಗ್ರೇಡಿಂಗ್ ಫಾರ್ಮಗಳು ಇಲ್ಲ ಎಂದು ತಿಳಿಸಿ ಅದಕ್ಕೆ ಸಂಬಂಧಿಸಿದ ದಾಖಲಾತಿಗಳ ಯಥಾ ನಕಲುಗಳನ್ನು ತಮ್ಮ ವರದಿಯಲ್ಲಿ ಲಗತ್ತಿಸಿ ನೀಡಿರುವುದಾಗಿ, ನಿಪಿ 28 ವರದಿಯನ್ನು ಹಾಗೂ ಅದರಲ್ಲಿರುವ ತಮ್ಮ ಸಹಿಯನ್ನು ಹಾಗೂ ಲಗತ್ತಾಗಿರವ ಮನವಿ ಪತ್ರದಲ್ಲಿ ಕಾಣಿಸಿರುವಂತಹ ಕ್ರಮ ಸಂಖೆ 1 ರಿಂದ 5 ದಾಖಲಾತಿಗಳನ್ನು ನೋಡಿ ಗುರುತಿಸಿ, ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ **16 –** ಅಸಾ 3 ರವರು ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ ಸದ್ರಿ ವರದಿಯೊಂದಿಗೆ ಗ್ರೇಡಿಂಗ್ ಫಾರ್ಮ ಹಾಗೂ ಪ್ರಾಜೆಕ್ಟ ರಿಪೋರ್ಟ ಮತ್ತು 15 ಸಂಘಗಳ ಸದಸ್ಯರ ಮಾಹಿತಿ ಇರುವಂತಹ ದಾಖಲಾತಿಗಳ ಜೆರಾಕ್ಸ ಪ್ರತಿಯನ್ನು ಲಗತ್ತಿಸಿ ನೀಡಿರುವುದಾಗಿ, ದಿ 2.5.2006 ರಂದು ತೋರ್ಕೆ ಗ್ರಾಮಪಂಚಾಯತಿಯಿಂದ ಲಿಖಿತ ಪತ್ರವನ್ನು ಸ್ವೀಕರಿಸಿದ್ದು ಅದರಲ್ಲಿಯೂ ಸಹಃ ಕ್ರಮ ಸಂಖ್ಯೆ 1 ರಿಂದ 3 ಸ್ವ ಸಹಾಯ ಸಂಘಗಳು ಅಸ್ತಿತ್ವದಲ್ಲಿ ಇಲ್ಲಾ ಹಾಗೂ ಇದಕ್ಕೆ ಸಂಬಂಧಿಸಿದಂತೆ ತಾವು ಯಾವುದೇ ಸಹಾಯಧನ ಮಂಜೂರು ಮಾಡಲು ಪ್ರಸ್ತವನೆ ಸಲ್ಲಿಕೆಯಾಗಿರುವುದಿಲ್ಲ ಎಂದು ಮಾಹಿತಿ ನೀಡಿರುವುದಾಗಿ, ಸದ್ರಿ ಮಾಹಿತಿಯನ್ನು ಹಾಗೂ ಅದರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿ, ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ **17 –** ಅಸಾ 3 ರವರು ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ ದಿಃ 13.6.2006 ರಂದು ತಾಲೂಕು ಪಂಚಾಯತ ಕುಮಟಾರವರಿಂದ ಲಿಖಿತ ಪತ್ರವನ್ನು ಸ್ವೀಕರಿಸಿದ್ದು ಸದ್ರಿ ಪತ್ರವು ದಿಃ 25.4.2006 ರ ಅವರ ಮನವಿ ಪತ್ರಕ್ಕೆ ಸಂಬಂಧಿಸಿದಂತ ಮಾಹಿತಿಯಾಗಿರುವುದಾಗಿ, ಅದೇ ದಿನ ಶ್ರೀಧರ ಎಸ್ ಭಟ್ಟ ತಾಲೂಕು ಪಂಚಾಯತ ಕುಮಟಾ ರವರನು ವಿಚಾರಣೆ ಮಾಡಿ ಹೇಳಿಕೆ ಪಡೆದುಕೊಂಡಿದ್ದು, ತನಿಖೆಯಲ್ಲಿ ದೂರು ನೀಡಿರುವಂತಹ ಃನೇ ಆರೋಪಿಯಾದ ನೀವು ಸಹ ಪ್ರಕರಣದಲ್ಲಿ ಭಾಗಿಯಾಗಿರುವ . ಬಗ್ಗೆ ಕಂಡುಬಂದ ಕಾರಣ ನಿಮ್ಮನ್ನು ಆರೋಪಿಯನ್ನಾಗಿ ಮಾಡುವಲ್ಲಿ ನ್ಯಾಯಾಲಯಕ್ಕೆ ಮನವಿ ಪತ್ರವನ್ನು ನೀಡಿರುವುದಾಗಿ, ಸದ್ರಿ ಮನವಿಯ ಮೇರೆಗೆ ನ್ಯಾಯಾಲಯದ ಅದೇಶದನ್ವಯ ಸದ್ರಿ ಪ್ರಕರಣದಲ್ಲಿ ಅವರು ಫಿರ್ಯಾದುದಾರರಾಗಿ ಮುಂದುವರೆದಿದ್ದಾಗಿ, ಕಾರವಾರ ಪೊಲೀಸ್ ಅಧೀಕ್ಷಕರ ಆದೇಶದನ್ವಯ ಮುಂದಿನ ತನಿಖೆಗಾಗಿ ಕಡತವನ್ನು ಕುಮಟಾ ವೃತ್ತ ನಿರೀಕ್ಷಕರಿಗೆ ಹಸ್ತಾಂತರಿಸಿರುವುದಾಗಿ, ಮಾಹಿತಿಯ ವರದಿಯನ್ನು, ಮನವಿ ಪತ್ರವನ್ನು ಹಾಗೂ ಅದರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿ, ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ **18 –** ಅಸಾ 4 ವಿ ಶ್ಯಾಮಸುಂದರ ಕಾಮತ ಇವರು ತಮ್ಮ ಸಾಕ್ಷ್ಯದಲ್ಲಿ 2001-2005 ರವರೆಗೆ ಅವರು ಕುಮಟಾ ಸಿಂಡಿಕೇಟ್ ಬ್ಯಾಂಕ ಶಾಖೆಯಲ್ಲಿ ವ್ಯವಸ್ಥಾಪಕರಾಗಿ

ಕರ್ತವ್ಯ ನಿರ್ವಹಿಸುತ್ತಿದ್ದು, ಹನೇಹಳ್ಳಿ ಸೊಸೈಟಿಗೆ ಸಂಬಂಧಿಸಿದಂತೆ ಚೆಕ್ಕನ ವಿಚಾರವಾಗಿ ಪೋಲಿಸರು ಅವರಿಗೆ ನೋಟಿಸು ನೀಡಿದ್ದರ ಮೇರೆಗೆ ಮೇ 2006 ರ ಸುಮಾರಿಗೆ ಗೋಕರ್ಣ ಪೋಲಿಸ್ ಠಾಣೆಯಲ್ಲಿ ಪೋಲಿಸರು ದಿ: 7.7.2004 ರ ಮೊತ್ತ 13 ಲಕ್ಷ ರೂ ಎಂದು ಬರೆಯಲಾದ ಚೆಕ್ಕನ್ನು ತೋರಿಸಿ ಸದ್ರಿ ಚೆಕ್ಕು ನಗದೀಕರಿಸಿಕೊಳ್ಳಲಾಗಿದೆಯಾ ಎಂದು ಕೇಳಿದ್ದು, ಸದ್ರಿ ಚೆಕ್ಕನಲ್ಲಿ ನಮೂದಾದ ದಿನಾಂಕದ ಮಾರನೇ ದಿನ ನಗದೀಕರಿಸಿಕೊಳ್ಳಲಾಗಿದ್ದು, ವ್ಯವಸ್ಥಾಪಕರು ವಿ ಎಸ್ ಎಸ್ ಬ್ಯಾಂಕ ಹನೇಹಳ್ಳಿ ಎಂದು ಬರೆಯಲಾದ ಕುಮಟಾ ತಾಲೂಕು ಪಂಚಾಯತಿಗೆ ಸಂಬಂಧಿಸಿದ ಚೆಕ್ಕು ಆಗಿದ್ದು, ಸದ್ರಿ ಚೆಕ್ಕು ತಾಲೂಕು ಪಂಚಾಯತಿಯ ಕಾರ್ಯನಿರ್ವಹಣಾಧಿಕಾರಿಗಳ ಸಹಿ ಹಾಗೂ ಇನ್ನೊಂದು ಸಹಿ ಇದ್ದುದಾಗಿ, ನಗದೀಕರಿಸಿಕೊಂಡಂತಹ ವ್ಯಕ್ತಿಯ ಸಹಿ ಸದ್ರಿ ಚೆಕ್ಕನ ಹಿಂಭಾಗದಲ್ಲಿ ಇದ್ದುದ್ದಾಗಿ, ಬ್ಯಾಂಕಗೆ ಬಂದು ಹಣ ಪಡೆದುಕೊಳ್ಳುವ ಸಮಯದಲ್ಲಿ ಸದ್ರಿ ಚೆಕ್ಕನ ಹಿಂಭಾಗದಲ್ಲಿರುವ ಸಹಿಯನ್ನು ಮಾಡಿರುವುದಾಗಿ, ಸದ್ರಿ ಚೆಕ್ಕನ್ನು ೧ನೇ ಆರೋಪಿಯಾದ ನೀವು ಅವರ ಬ್ಯಾಂಕಗೆ ಹೋಗಿ ಚೆಕ್ಕನ ಹಣವನ್ನು ನಗದೀಕರಿಸಿಕೊಂಡು ಹೋಗಿರುವುದಾಗಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ **19** – ಅಸಾ 4 ರವರು ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ ಸರಕಾರಿ ಮಟ್ಟದಲ್ಲಿ ಬ್ಲಾಕ್ ಲೆವಲ್ ಬ್ಯಾಂಕರ ಕಮೀಟಿ ಮೀಟಿಂಗ್ 3 ತಿಂಗಳ ಅವಧಿಗೊಮ್ಮೆ ನಡೆಯುತ್ತಿದ್ದು ಆ ಸಮಯದಲ್ಲಿ ೧ನೇ ಆರೋಪಿಯಾದ ನಿಮ್ಮನ್ನು ನೋಡಿದ ಪರಿಚಯವಿರುವುದಾಗಿ, ಹಾಗೂ ಸದ್ರಿಯವರನ್ನು ನೋಡಿ ಗುರುತಿಸಿ ಹಾಗೂ ನಿಪಿ 3 ರಲ್ಲಿ ಬ್ಯಾಂಕಿನ ಅಧಕಾರಿಯಾಗಿ ಅವರ ಸಹಿಯನ್ನು ನೋಡಿ ಗುರುತಿಸಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ **20** – ಅಸಾ 5 ಲಕ್ಷ್ಮೀನಾರಾಯಣ ವೆಂಕಟೇಶ ನಾಯಕ ಇವರು ತಮ್ಮ ಸಾಕ್ಷ್ಯದಲ್ಲಿ ಗೋಕರ್ಣ ಪೋಲಿಸರು ವಿಚಾರಣೆಯ ಸಲುವಾಗಿ ಫೆಬ್ರುವರಿ 2006 ರಂದು ಅವರ ಬ್ಯಾಂಕಿಗೆ ಬಂದಿದ್ದು ತಾಲೂಕು ಪಂಚಾಯತಿ ಕುಮಟಾದವರು ವಿ ಎಸ್ ಎಸ್ ಬ್ಯಾಂಕ್ ಹನೇಹಳ್ಳಿಗೆ ನೀಡಿರುವಂತ 13 ಲಕ್ಷ ರೂಗಳ ಚೆಕ್ಕಗೆ ಸಂಬಂಧಿಸಿದಂತೆ ಅವ್ಯವಹಾರ ನಡೆದಿದ್ದು, ಅದರ ಕುರಿತಂತೆ ತನಿಖೆಗೆ ಬಂದಿರುವುದಾಗಿ ತಿಳಿಸಿ ಒಂದು ಪತ್ರವನ್ನು ನೀಡಿ ಸದ್ರಿ ಚೆಕ್ಕು ತಮ್ಮ ತನಿಖೆ ಸಲುವಾಗಿ ಬೇಕಾಗಿದೆ ಎಂದು ತಿಳಿಸಿದ ಮೇರೆಗೆ ಸದ್ರಿ 13 ಲಕ್ಷ ರೂ ಗಳ ಚೆಕ್ಕನ್ನು ಪೋಲಿಸರಿಗೆ ನೀಡಿದ್ದು, ಸದ್ರಿ ಚಕ್ಕ ನಂ.756368 ದಿನಾಂಕ 7.7.2004 ಮೊತ್ತ 13 ಲಕ್ಷ ಎಂದು ನಮೂದಾಗಿದ್ದು, 13 ಲಕ್ಷದ ಚೆಕ್ಕನ್ನು ಕೌಂಟರನಲ್ಲೆ ನಗದೀದರಿಸಿಸ್ಕೊಳ್ಳುವ ಸಾಧ್ಯತೆಗಳ ಬಗ್ಗೆ ಬ್ಯಾಂಕಿಂಗ್ ನಿಯಮಾವಳಿಗಳನ್ನು ಪೋಲಿಸರು ಕೇಳಿದಾಗ ಅವರು ಬ್ಯಾಂಕಿಂಗ್ ಮ್ಯಾನುವೆಲ ಪ್ರತಿಯನ್ನು ಒದಗಿಸಿದ್ದು, ಸದ್ರಿ ಮ್ಯಾನುವಲ್ ನ ಅನುಸಾರ ಎಷ್ಟು ಹಣವನ್ನು ಬೇಕಾದರೂ ಕ್ಯಾಶ ಕೌಂಟರನಲ್ಲಿ ಕೊಡಬಹುದಾಗಿದ್ದು ಸದ್ರಿ 13 ಲಕ್ಷದ ಚೆಕ್ಕು ಬೇರರ್ ಚೆಕ್ಕು ಆಗಿದ್ದು ಅದು ಅನ್ ಕ್ರಾಸ್ಡ ಚೆಕ್ಕಾಗಿದ್ದು, ಸದ್ರಿ ಚೆಕ್ಕನ ಹಣವನ್ನು ಅವರ ಬ್ಯಾಂಕರ್ ನ ಕೌಂಟರನಲ್ಲಿ ಕೊಡಬಹುದಾದಂತ ಮೊತ್ತವಾಗಿದ್ದು ಸದ್ರಿ ಚೆಕ್ಕನ ಮೊತ್ತವನ್ನು ನಗದೀಕರಿಸಿಕೊಳ್ಳಲಾಗಿರುವುದಾಗಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ **21** –ಪ್ರಾ ಸಾ 6 ಶ್ರೀಧರ ಎಸ್ ಭಟ್ಟ ಇವರು ತಮ್ಮ ಸಾಕ್ಷ್ಯದಲ್ಲಿ ಜನವರಿ 2006 ರಲ್ಲಿ ಅವರು ಎಸ್‌ಜಿಎಸ್‌ವಾಯನ ವಿಷಯ ನಿರ್ವಾಹಕರಾಗಿ ಸರ್ಕಾರಿ ಆದೇಶದ ಮೇರೆಗೆ

ಪ್ರಭಾರವನ್ನು ೨ನೇ ಆರೋಪಿಯಾದ ನಿಮ್ಮಿಂದ ವಹಿಸಿಕೊಂಡಿರುವುದಾಗಿ, ಹನೇಹಳ್ಳಿ ಸ್ವಸಹಾಯ ಸಂಘದಲ್ಲಿ ಸಹಾಯಧನ ಕೊಟ್ಟಿರುವ ಆಯಾಯ ಸಂಘಗಳಿಗೆ ತಲುಪಿಲ್ಲ ಎಂದು ಹೇಳಿ ೨ ಮತ್ತು ೩ ನೇ ಆರೋಪಿತರಾದ ನಿಮ್ಮಗಳ ಮೇಲೆ ಹಾಗೂ ಲೆಕ್ಕಾಧೀಕ್ಷಕರ ಮೇಲೆ ದೂರು ದಾಖಲಾಗಿರುವುದಾಗಿ, ಪ್ರಭಾರ ಪಟ್ಟಿಯನ್ನು ೨ನೇ ಆರೋಪಿಯಾದ ನೀವು ತಯಾರಿಸಿಕೊಟ್ಟಿದ್ದು ಅದರ ಅನುಸಾರವಾಗಿ ಅವರು ಪ್ರಭಾರ ಪಡೆದುಕೊಂಡಿರುವುದಾಗಿ, ಸದ್ರಿ ಪ್ರಭಾರ ಪಟ್ಟಿಯಲ್ಲಿ 15 ಸ್ವಸಹಾಯ ಸಂಘಗಳಿಗೆ ನೀಡಬೇಕಾದಂತಹ ಸಹಾಯಧನದ ಬಗ್ಗೆ ಯಾವುದೇ ದಾಖಲಾತಿಗಳು ಇರಲಿಲ್ಲಾವಾಗಿ, ಆ ಬಗ್ಗೆ ಅವರು ನಿಮ್ಮನ್ನು ಕೇಳಿದ್ದು, ನೀವು ಯಾವುದೇ ದಾಖಲಾತಿಗಳನ್ನು ಒದಗಿಸಿರುವುದಿಲ್ಲವೆಂದು ಮತ್ತು ಆ ಬಗ್ಗೆ ಅವರ ಮೇಲಾಧಿಕಾರಿಗಳಿಗೆ ತಿಳಿಸಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನಾದರೂ ಹೇಳಲು ಇಚ್ಛಿಸುವಿರಾ?

ಉತ್ತರಃ ಸುಳ್ಳು

ಪ್ರಶ್ನೆ **22** –ಪ್ರಾ ಸಾ 7 ಈಶ್ವರ ಗಣಪು ಹರಿಕಾಂತ ಇವರು ತಮ್ಮ ಸಾಕ್ಷ್ಯದಲ್ಲಿ ಅವರು ಇಲಾಖಾ ಕೆಲಸದ ಜೊತೆ ಸ್ವಸಹಾಯ ಸಂಘಗಳಿಗೆ ಮೀನುಗಾರಿಕಾ ಚುಟುವಟಿಕೆ ಸಂಬಂಧಿಸಿದಂತೆ ಯೋಜನಾ ವರದಿ ತಯಾರಿಸಿ ಕೊಡುತ್ತಿರುವುದಾಗಿ, ತಾಲೂಕಾ ಪಂಚಾಯತಿಯ ಕಾರ್ಯ ನಿರ್ವಹಣಾ ಅಧಿಕಾರಿಗಳು ನೀಡಿರುವಂತಹ ಕೋರಿಕೆ ಪತ್ರದ ಆಧಾರದ ಮೇಲೆ ಅವರು ಯೋಜನಾ ವರದಿಯನ್ನು ತಾಲೂಕಾ ಪಂಚಾಯತಿಗೆ ನೀಡಲಾಗುತ್ತಿರುವುದಾಗಿ, ಗೋಕರ್ಣ ಪೊಲೀಸ್ ವಿಚಾರಣೆಗೆ ಕರೆಸಿ ಹನೇಹಳ್ಳಿ ಪಂಚಾಯತ್ ವ್ಯಾಪ್ತಿಗೆ ಬರುವ 8 ಸ್ವಸಹಾಯ ಸಂಘಗಳ ಹೆಸರುಗಳನ್ನು ಹೇಳಿ, ಸ್ವಸಹಾಯ ಸಂಘಗಳಿಗೆ ಯಾವುದಾದರೂ ಮೀನುಗಾರಿಕಾ ಚಟುವಟಿಕೆ ಸಂಬಂಧಿಸಿದಂತೆ ಯೋಜನಾ ವರದಿ ನೀಡಿದ್ದರ ಬಗ್ಗೆ ಕೇಳಿರುವುದಾಗಿ, ಅದಕ್ಕೆ ಅವರು ಯಾವುದೇ ವರದಿ ಕೋರಿಕೆ ಪತ್ರ ಬಂದಿರುವುದಿಲ್ಲ ಹಾಗೂ ಯಾವುದೇ ಯೋಜನಾ ವರದಿ ನೀಡಿರುವುದಿಲ್ಲಾವಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನಾದರೂ ಹೇಳಲು ಇಚ್ಛಿಸುವಿರಾ?

ಉತ್ತರಃ ಸುಳ್ಳು

ಪ್ರಶ್ನೆ **23** –ಪ್ರಾ ಸಾ 8 ರಾಜೀವ ದೇವರಾಯ ನಾಯ್ಕ ಇವರು ತಮ್ಮ ಸಾಕ್ಷ್ಯದಲ್ಲಿ ಆರೋಪಿಯಾದ ೩ನೇ ಆರೋಪಿಯಾದ ನೀವು ಅವರಿಗಿಂತ ಪೂರ್ವದಲ್ಲಿ ಕುಮಟಾ ತಾಲೂಕಾ ಪಂಚಾಯತಿಯಲ್ಲಿ ಕಾರ್ಯನಿರ್ವಹಣಾಧಿಕಾರಿಯಾಗಿ ಕೆಲಸ ಮಾಡಿರುವುದಾಗಿ, 4ನೇ ಆರೋಪಿಯು ಕುಮಟಾ ತಾಲೂಕಾ ಪಂಚಾಯತಿಯಲ್ಲಿ ಲೆಕ್ಕ ಅಧೀಕ್ಷಕರಾಗಿ ಕರ್ತವ್ಯ ನಿರ್ವಹಿಸುತ್ತಿರುದಾಗಿ, ೨ನೇ ಆರೋಪಿಯಾದ ನೀವು, ಅವರು ತಾಲೂಕು ಪಂಚಾಯತಿಯಲ್ಲಿ ಕೆಲಸ ಮಾಡುವ ಪೂರ್ವದಲ್ಲಿ ಎಸ್‌ಜಿಎಸ್‌ವಾಯ್ ವಿಷಯ ನಿರ್ವಾಹಕರಾಗಿ ತಾಲೂಕಾ ಪಂಚಾಯತಿಯಲ್ಲಿ ಕೆಲಸ ಮಾಡುತ್ತಿರುವುದಾಗಿ, ಅವರು ಕಾರ್ಯನಿರ್ವಾಹಣಾಧಿಕಾರಿಯಾಗಿ ಕೆಲಸ ಮಾಡುತ್ತಿರುವ ಸಮಯದಲ್ಲಿ ಗೋಕರ್ಣ ಪೊಲೀಸರು ಅವರ ಕಚೇರಿಗೆ ಬಂದು ತನಿಖೆ ಮಾಡಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನಾದರೂ ಹೇಳಲು ಇಚ್ಛಿಸುವಿರಾ?

ಉತ್ತರಃ ಸುಳ್ಳು

ಪ್ರಶ್ನೆ **24** –ಪ್ರಾ ಸಾ 8 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ದಿಃ 17-03-2006ಕ್ಕೆ ಗೋಕರ್ಣ ಪಿಎಸ್‌ಐರವರು ಕಚೇರಿಗೆ ಪತ್ರ ಬರೆದು ಆರೋಪಿಗಳಾದ ನಿಮ್ಮಗಳ ಪೈಕಿ 1ನೇ ಮತ್ತು 2ನೇ ಆರೋಪಿಗಳಾದ ನಿಮ್ಮ ಕುರಿತು ಹಾಗಾ 15 ಸ್ವಸಹಾಯ ಸಂಘ, ಹನೇಹಳ್ಳಿ 13 ಲಕ್ಷ ರೂಪಾಯಿ ಅವ್ಯವಹಾರ ನಡೆದ ಕುರಿತು ಮಾಹಿತಿಗಳನ್ನು

ಕೇಳಿರುವುದಾಗಿ, ದಿಃ 25-03-2006, ದಿಃ24-04-2006, ದಿಃ23-05-2006ಪಿ ದಿಃ 12-06-2006ರಂತೆ ಪೊಲಿಸರು ಮನವಿ ಮಾಡಿಕೊಂಡಂತೆ ಪತ್ರಗಳ ಮೂಲಕ ಲಿಖಿತ ರೂಪದಲ್ಲಿ ಮಾಹಿತಿಯನ್ನು ನೀಡಿರುವುದಾಗಿ, ಅವರು ಆರೋಪಿಗಳಾದ ನಿಮ್ಮಗಳ ಪೈಕಿ 2 ರಿಂದ 4 ಆರೋಪಿಗಳಾದ ನಿಮ್ಮನ್ನು ನೋಡಿ ಗುರುತಿಸಿ, ನಿಪಿ.18, ನಿಪಿ.21, ನಿಪಿ.28, ಮತ್ತು ನಿಪಿ.30 ಹಾಗೂ ಅವುಗಳಲ್ಲಿರುವ ತಮ್ಮ ಸಹಿಗಳನ್ನು ನೋಡಿ ಗುರುತಿಸಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನಾದರೂ ಹೇಳಲು ಇಚ್ಛಿಸುವಿರಾ?

ಉತ್ತರಃ ಸುಳ್ಳು

ಪ್ರಶ್ನೆ **25** –ಪ್ರಾ ಸಾ 9 ಹೆಚ್ ಜಿ ಶಿವಾನಂದ ಮೂರ್ತಿ ಇವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕ 13-10-2006ರಂದು ಕುಮಟಾ ವೃತ್ತ ನಿರೀಕ್ಷಕರು ವಿ ಎಸ್ ಎಸ್ ಬ್ಯಾಂಕ್ ಹನೇಹಳ್ಳಿಯಲ್ಲಿ ನಡೆದಂತಹ ಅವ್ಯವಹಾರಕ್ಕೆ ಸಂಬಂಧಿಸಿದಂತೆ ಲೆಕ್ಕ ಪರಿಶೋಧನಾ ವರದಿ ನೀಡುವಂತೆ ಕೇಳಿಕೊಂಡಿರುವುದಾಗಿ, ಸದ್ರಿ ಪತ್ರಕ್ಕೆ ಅವರು ದಿಃ 06-11-2006ರಂದು ವರದಿಯನ್ನು ನೀಡಿದ್ದಾಗಿ, ಕಾರ್ಯನಿರ್ವಹಣಾ ಅಧಿಕಾರಿಯವರು ಇಲಾಖಾ ವಿಚಾರಣೆಗೆ ಸಂಬಂಧಿಸಿದಂತೆ ಪೊಲೀಸರು ಮಾಹಿತಿ ಕೇಳಿದ್ದು ಅದಕ್ಕೆ ಅವರು ಮಾಹಿತಿ ನೀಡಿರುವುದಾಗಿ, ದಿಃ 22-03-2006ರಂದು ಆರಕ್ಷಕ ಉಪ-ನಿರೀಕ್ಷಕರು ಗೋಕರ್ಣ ರವರು ೧ನೇ ಆರೋಪಿಯಾದ ನೀವು ವಿ ಎಸ್ ಎಸ್ ಹನೇಹಳ್ಳಿ ಇವರು ರೂ.13 ಲಕ್ಷ ಸಹಾಯಧನ ದುರುಪಯೋಗ ಪಡಿಸಿಕೊಂಡ ಬಗ್ಗೆ ಪತ್ರ ಬರೆದು ವರದಿಯನ್ನು ಕೇಳಿದ್ದಕ್ಕೆ ದಿಃ25-03-2006ರಂದು ಪತ್ರ ಬರೆದು ವರದಿಯನ್ನು ನೀಡಿರುವುದಾಗಿ, ದಿನಾಂಕಃ 19-01-2007ರಂದು ಪೊಲೀಸ್ ಕುಮಟಾ ವೃತ್ತ ನಿರೀಕ್ಷಕರು, ಕುಮಟಾ ತಾಲೂಕ ಪಂಚಾಯತ್ ಹಿಂದಿನ ಕಾರ್ಯನಿರ್ವಹಣಾ ಅಧಿಕಾರಿ ಆರ್ ಎನ್ ನಾಯಕ್ ರವರ ಇಲಾಖಾ ವಿಚಾರಣಾ ಸಂಬಂಧಿಸಿದಂತೆ ಮಾಹಿತಿಯನ್ನು ಕೇಳಿದ್ದು, ದಿನಾಂಕ 27-03-2007ರಂದು ಮಾಹಿತಿಯನ್ನು ನೀಡಿ ಅದರೊಂದಿಗೆ ಅನುಬಂಧ -1 ರಿಂದ ಅನುಬಂಧ -4 ರ ಆರೋಪ ಪಟ್ಟಿಯ ಪ್ರತಿಯನ್ನು ಲಗತ್ತಿಸಿ ಕಳಿಸಿರುವುದಾಗಿ, ಸದ್ರಿ ಪತ್ರದೊಂದಿಗೆ ೩ನೇ ಆರೋಪಿಯಾದ ನಿಮ್ಮ ಅಮಾನತ್ತು ತೆರವುಗೊಳಿಸಿದ ಬಗ್ಗೆ ಸರ್ಕಾರದ ಆದೇಶದ ನಕಲು ಪ್ರತಿಯನ್ನು ಲಗತ್ತಿಸಿ ಕೊಟ್ಟಿರುವುದಾಗಿ, ಆರೋಪಿ ಹಿರೇಕಟ್ಟು ರವರ ವಿರುದ್ಧ 1 ರಿಂದ 8 ಆರೋಪಗಳನ್ನು ಮಾಡಲಾಗಿರುವುದಾಗಿ, ೨ನೇ ಆರೋಪಿಯಾದ ನಿಮ್ಮ ವಿರುದ್ಧ 1 ರಿಂದ 8 ಆರೋಪಗಳನ್ನು ಮಾಡಲಾಗಿರುವುದಾಗಿ, ನಿಪಿ19-ವರದಿ, ನಿಪಿ 32ಪತ್ರ ಹಾಗೂ ಅವುಗಳಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನಾದರೂ ಹೇಳಲು ಇಚ್ಛಿಸುವಿರಾ?

ಉತ್ತರಃ ಸುಳ್ಳು

ಪ್ರಶ್ನೆ **26** –ಪ್ರಾ ಸಾ 10 ಟಿ ದಿನೇಶ ತಿಮ್ಮಯ್ಯ ಇವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕ 19-01-2007ರಂದು ಕುಮಟಾ ವೃತ್ತ ನಿರೀಕ್ಷಕರು ವಿ ಎಸ್ ಎಸ್ ಬ್ಯಾಂಕ್ ಹನೇ ಹಳ್ಳಿಗೆ ಸಂಬಂದಿಸಿದ ಕುಮಟಾ ತಾಲೂಕಾ ಪಂಚಾಯಿತಿ ಹಿಂದಿನ ಲೆಕ್ಕ ಅಧೀಕ್ಷಕರು ಎಸ್ ಕೆ ಹಿರೇಕಟ್ಟೆ ವಿಷಯ ನಿರ್ವಾಹಕರಾದ ೨ನೇ ಮತ್ತು ೩ನೇ ಆರೋಪಿಯಾದ ನಿಮ್ಮಗಳ 2004-05ರ ಮಾದರಿ ಬರವಣಿಗೆ ಹಾಗೂ ಸಹಿಗಳಿರುವ ಕಾಗದಪತ್ರಗಳನ್ನು ಹಾಜರುಪಡಿಸುವಂತೆ ಕೇಳಿರುವುದಾಗಿ, ದಿಃ 24-01-2007ರಂದು ಅವರ ಪತ್ರದೊಂದಿಗೆ ದಾಖಲಾತಿಗಳನ್ನು ಲಗತ್ತಿಸಿ ಕೊಟ್ಟಿರುವುದಾಗಿ, ಆ ಉ ನಿ ಗೋಕರ್ಣ ರವರು ದಿಃ 22-08-2006ರಂದು ಪತ್ರ ಬರೆದು ೧ನೇ ಆರೋಪಿಯಾದ ಇವರು ರೂ.13 ಲಕ್ಷ ಸಹಾಯಧನ ದುರುಪಯೋಗಪಡಿಸಿಕೊಂಡಿರುವ ಬಗ್ಗೆ ಮಾಹಿತಿ ಪೂರೈಸುವಂತೆ ಪತ್ರ ಬರೆದಿರುವುದಾಗಿ, ದಿಃ 13-09-2006ರಂದು ವರದಿಯನ್ನು ನೀಡಿರವುದಾಗಿ, ದಿಃ 30-12-2006ರಂದು ವೃತ್ತ ನಿರೀಕ್ಷಕರು ಕುಮಟಾರವರು ಬರೆದಿರುವಂತಹ ಪತ್ರಕ್ಕೆ ದಿಃ 30-12-2006ರಂತೆ ಮಾಹಿತಿಯನ್ನು ಒದಗಿಸಿದ್ದಾಗಿ,

ದಿಃ13-10-2006ರಂದು ವೃತ್ತ ನಿರೀಕ್ಷರು ಕುಮಟಾ ರವರು ೨ನೇ ಆರೋಪಿಯಾದ ನೀವು ನೀಡಿದ ದಾಖಲೆಗಳ ಚಾರ್ಜ ಲೀಸ್ಟನ್ನು ಪೂರೈಸುವಂತೆ ಕೋರಿರುವುದಾಗಿ, ಅದಕ್ಕೆ ಸಂಬಂಧಿಸಿದಂತೆ ದಿಃ17-10-2006 ರಂದು ಅವರು ಪತ್ರ ಬರೆದು ವರದಿಯನ್ನು ನೀಡಿರುವುದಾಗಿ, ನಿಪಿ.16-ಪತ್ರ, ನಿಪಿ.33-ವರದಿ, ನಿಪಿ.34-ಮಾಹಿತಿ ಪತ್ರ, ನಿಪಿ.35-ಪತ್ರ ಹಾಗೂ ಅದರಲ್ಲಿರುವ ತಮ್ಮ ಸಹಿಯನ್ನು ಅವರು ನೋಡಿ ಗುರುತಿಸಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನಾದರೂ ಹೇಳಲು ಇಚ್ಛಿಸುವಿರಾ?

ಉತ್ತರಃ ಸುಳ್ಳು

ಪ್ರಶ್ನೆ **27** –ಪ್ರಾ ಸಾ 11 ರಾಮಾಕೃಷ್ಣ ವಾಸುದೇವ್ ಭಟ್ ತಮ್ಮ ಸಾಕ್ಷ್ಯದಲ್ಲಿ ದಿಃ 21-04-2006ರಂದು ಗೋಕರ್ಣ ಪೊಲೀಸ್ ಠಾಣಾ ಪಿಎಸ್ಐರವರು ಅವರಿಗೆ ಲಿಖಿತವಾಗಿ ಕೆಲವು ಮಾಹಿತಿಗಳನ್ನು ಸ್ವಸಹಾಯ ಸಂಘಗಳ ಸಲುವಾಗಿ ಗುನ್ನ ಸಂಖ್ಯೆ 12-2006 ರಲ್ಲಿ ಕೇಳಿರುವುದಾಗಿ, ಅದರಲ್ಲಿ 15 ಸ್ವಸಹಾಯ ಸಂಘಗಳ ಹೆಸರುಗಳುಳ್ಳ ಯಾದಿಯನ್ನು ಕೊಟ್ಟು ಸದ್ರಿ ಸಂಘಗಳ ವಿಎಸ್ಎಸ್ ಹನೇಹಳ್ಳಿ ಬ್ಯಾಂಕನ ವ್ಯಾಪ್ತಿಯಲ್ಲಿ ಅಸ್ತಿತ್ವದಲ್ಲಿ ಇರುವ ಬಗ್ಗೆ ಹಾಗೂ ಅವುಗಳಿಗೆ ಸರ್ಕಾರದಿಂದ ಸಹಾಯಧನ ಬಿಡುಗಡೆಯಾಗಿರುವ ಬಗ್ಗೆ ಮಾಹಿತಿಯನ್ನು ಕೇಳಿದ್ದಾಗಿ, ದಿಃ 26-04-2006ರಂದು ಅವರು ಕೂಲಂಕುಷವಾಗಿ ಪರಿಶೀಲಿಸಿ ರೈತ ಮಹಿಳಾ ಸ್ವಸಹಾಯ ಸಂಘ, ಗೋನೇಹಳ್ಳಿ, ವೈಭವಲಕ್ಷ್ಮಿ ಮಹಿಳಾ ಸಂಘ ದೇವಣಾ, ಓಂಕಾರ ಸ್ವಸಹಾಯ ಸಂಘ, ದುಬ್ಬನಶಶಿ ಮಾತ್ರ ಅವರ ಬ್ಯಾಂಕನಲ್ಲಿ ಉಳಿತಾಯ ಖಾತೆಯನ್ನು ಹೊಂದಿರುವುದಾಗಿ, ಉಳಿದ ಯಾವುದೇ ವ್ಯವಹಾರಗಳು ಅಲ್ಲಿ ಇರುವುದಿಲ್ಲವೆಂದು ಮಾಹಿತಿಯನ್ನು ನೀಡಿರುವುದಾಗಿ, ಈ ಮೂರು ಸ್ವಸಹಾಯ ಸಂಘಗಳಿಗೆ ಕುಮಟಾ ತಾಲೂಕಾ ಪಂಚಾಯತಿಯಿಂದ ಸಹಾಯಧನ ಬಿಡುಗಡೆಯಗಿರುವುದಿಲ್ಲವೆಂದು, ಇನ್ನುಳಿದ 12 ಸ್ವಸಹಾಯ ಸಂಘಗಳು ವಿಎಸ್ಎಸ್ ಹನೇಹಳ್ಳಿ ಖಾತೆ ಹೊಂದಿರುವುದಿಲ್ಲ ಮತ್ತು ಅವುಗಳು ಅಸ್ತಿತ್ವದಲ್ಲಿ ಇರುವುದಿಲ್ಲವೆಂದು ಮಾಹಿತಿಯನ್ನು ನೀಡಿರುವುದಾಗಿ, ನಿಪಿ 36- ಪತ್ರವನ್ನು ಹಾಗೂ ನಿಪಿ26-ಮಾಹಿತಿ ದಾಖಲಾತಿಯನ್ನು ಹಾಗೂ ಅದರಲ್ಲಿರುವ ತಮ್ಮ ಸಹಿಯನ್ನು ಗುರುತಿಸಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನಾದರೂ ಹೇಳಲು ಇಚ್ಛಿಸುವಿರಾ?

ಉತ್ತರಃ ಸುಳ್ಳು

ಪ್ರಶ್ನೆ **28** –ಪ್ರಾ ಸಾ 12 ಈಶ್ವರ ಹನುಮಂತ ನಾಯ್ಕ ಇವರು ತಮ್ಮ ಸಾಕ್ಷ್ಯದಲ್ಲಿ ದಿಃ 24-04-2006ರಂದು ಕುಮಟಾ ತಾಲೂಕು ಪಂಚಾಯತ್ ಕಾರ್ಯನಿರ್ವಹಣಾಧಿಕಾರಿಗಳು ಪತ್ರ ನೀಡಿ ೨ನೇ ಆರೋಪಿಯಾದ ನೀವು ಸೇವೆಗೆ ಸೇರಿದ ಬಗ್ಗೆ ನಿಮ್ಮ ಸೇವಾ ವಿವರಗಳನ್ನು ಕೂಡುವಂತೆ ಕೇಳಿದ ಮೇರೆಗೆ ದಿಃ25-04-2006 ರಂದು ೨ನೇ ಆರೋಪಿಯಾದ ನಿಮ್ಮ ನೇಮಕಾತಿಗೆ ಸಂಬಂಧಪಟ್ಟ ಮಾಹಿತಿಯನ್ನು ಹಾಗೂ ನಿಮ್ಮನ್ನು ಎಲ್ಲಿಗೆ ಕೆಲಸಕ್ಕೆ ನಿಯೋಜಿಸಲಾಗಿದೆ ಹಾಗೂ ಯಾವ ಯಾವ ಅವಧಿಯಲ್ಲಿ ಯಾವ ಯಾವ ಶಾಲೆಯಲ್ಲಿ ಹಾಗೂ ಯಾವ ಯಾವ ಅವಧಿಯಲ್ಲಿ ಕೆಲಸ ಮಾಡಿರುತ್ತೀರಿ ಎಂಬ ಬಗ್ಗೆ ಮಾಹಿತಿಯನ್ನು ನೀಡಿರುವುದಾಗಿ, ನಿಪಿ 27-ಮಾಹಿತಿಯನ್ನು ಹಾಗೂ ಅದರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನಾದರೂ ಹೇಳಲು ಇಚ್ಛಿಸುವಿರಾ?

ಉತ್ತರಃ ಸುಳ್ಳು

ಪ್ರಶ್ನೆ **29** –ಪ್ರಾ ಸಾ 13 ನಾಗಪ್ಪ ಗೋವಿಂದ ಗೌಡ ಇವರು ತಮ್ಮ ಸಾಕ್ಷ್ಯದಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿಗಳು ರಜೆಯಲ್ಲಿದ್ದಂತಹ ಸಮಯದಲ್ಲಿ ಕಚೇರಿಯ ದಾಖಲಾತಿಗೆ ಕ್ಷೇತ್ರ ಶಿಕ್ಷಣಾಧಿಕಾರಿಗಳ ಪರವಾಗಿ ಸಹಿ ಮಾಡುತ್ತಿದ್ದುದ್ದಾಗಿ, ದಿಃ24-04-2006ರಂದು ಕುಮಾಟಾ ತಾಲೂಕ ಪಂಚಾಯತಿಯ ಕಾರ್ಯನಿರ್ವಹಣಾಧಿಕಾರಿಗಳು ೨ನೇ ಆರೋಪಿಯಾದ ನೀವು ಸಾಕ್ಷರತಾ ಸಮನ್ವಯಾಧಿಕಾರ ಹುದ್ದೆಗೆ

ಹಾಜರಾಗಿರುವುದಾಗಿ, ಅವರು ನಿಯೋಜನೆಗೆ ಸಂಬಂಧಪಟ್ಟ ಆದೇಶದ ಪ್ರತಿ ಹಾಗೂ ಹಾಜರಾದ ವರದಿಯನ್ನು ಕೇಳಿರುವುದಾಗಿ, ಮೂಲ ಪ್ರತಿಗಳನ್ನು ನೋಡಿ ದಿಃ28-04-2006ರಂದು ಅದರ 2 ಪ್ರತಿಗಳ ಮೇಲೆ ಸಹಿ ಮಾಡಿ ಸದ್ರಿ ಪ್ರತಿಗಳೊಂದಿಗೆ ಕವರಿಂಗ್ ಲೆಟರ್ ಬರೆದು ತಿಳಿಸಿರುವುದಾಗಿ, ಪತ್ರವನ್ನು ಹಾಗೂ ಅದರಲ್ಲಿರುವ ತಮ್ಮ ಸಹಿಯನ್ನು ನಿಯೋಜನೆಯ ಆದೇಶ ಹಾಗೂ ಹಾಜರಾದ ಬಗ್ಗೆ ವರದಿಯ ದೃಢೀಕೃತ ಪ್ರತಿಯನ್ನು ನೋಡಿ ಗುರುತಿಸಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನಾದರೂ ಹೇಳಲು ಇಚ್ಛಿಸುವಿರಾ?

ಉತ್ತರಃ ಸುಳ್ಳು

ಪ್ರಶ್ನೆ **30** –ಪ್ರಾ ಸಾ 14 ಅನಂತ ಗಣಪತಿ ಭಟ್ ಇವರು ತಮ್ಮ ಸಾಕ್ಷ್ಯದಲ್ಲಿ ಪೊಲೀಸರು ಹನೇಹಳ್ಳಿ ಸೊಸೈಟಿಗೆ ಸಂಬಂಧಿಸಿದಂತೆ ಸ್ವಸಹಾಯ ಸಂಘದ ಹಣದ ವ್ಯವಹಾರಕ್ಕೆ ಸಂಬಂಧಿಸಿದಂತೆ ಮಾಹಿತಿ ಕೇಳಿರುವುದಾಗಿ, ಸದ್ರಿ ಪತ್ರಕ್ಕೆ ಅವರು ಸ್ವಸಹಾಯ ಸಂಘಗಳು ಅವರ ಪಂಚಾಯತಿಯಲ್ಲಿ ಬರುವುದಿಲ್ಲವೆಂದು ಮಾಹಿತಿಯನ್ನು ಲಿಖಿತವಾಗಿ ನೀಡಿರುವುದಾಗಿ, ನಿಪಿ 38-ಪತ್ರ, ನಿಪಿ 29-ಪತ್ರ, ಹಾಗೂ ಅದರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿ, ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನಾದರೂ ಹೇಳಲು ಇಚ್ಛಿಸುವಿರಾ?

ಉತ್ತರಃ ಸುಳ್ಳು

ಪ್ರಶ್ನೆ **31** –ಪ್ರಾ ಸಾ 15 ಕತ್ತಿಗೆರೆ ಗಂಗಾದರಪ್ಪ ತಮ್ಮ ಸಾಕ್ಷ್ಯದಲ್ಲಿ ಅವರು ಸ್ವಸಹಾಯ ಸಂಘಗಳಿಗೆ ಯೋಜನಾ ವರದಿಗಳನ್ನು ತಯಾರಿಸಿಕೊಡುವ ಕೆಲಸ ಮಾಡುತ್ತಿದ್ದು, ದಿಃ 21-06-2006 ರಂದು ಗೋಕರ್ಣ ಠಾಣೆಗೆ ಸಂಬಂಧಪಟ್ಟ ಪೊಲೀಸರು ಹನೇಹಳ್ಳಿ ಸೊಸೈಟಿಯಲ್ಲಿ 7 ಸ್ವಸಹಾಯ ಸಂಘಗಳಿಗೆ ರೂ 13 ಲಕ್ಷ ಚೆಕ್ ಸಬ್ಸಿಡಿ ವಿತರಣೆಯಾಗಿ ಅವ್ಯವಹಾರವಾಗಿದೆ ಎಂದು ಕಂಡು ಬಂದಿದ್ದಾಗಿ, ಈ ಬಗ್ಗೆ ಪ್ರೊಜೆಕ್ಟ ರಿಪೋರ್ಟನ್ನು ಕೊಟ್ಟಿದ್ದರ ಬಗ್ಗೆ ಲಿಖಿತವಾಗಿ ಕೇಳಿದ್ದು, ಕೋರಿಕೆ ಪತ್ರವನ್ನು ನೋಡಿ ಅದರಲ್ಲಿ ಅವರ ಕಚೇರಿಯ ಪಿಲ್ಡ ಆಫಿಸರ್ ಶ್ರೀನಿವಾಸ ಪಡೆದುಕೊಂಡು ಸಹಿ ಮಾಡಿದ್ದಾಗಿ, ದಿಃ24-04-2006ರಂದು ಸಂಬಂಧಪಟ್ಟ ತಾಲೂಕಾ ಪಂಚಾಯತಿಯ ಕೇಸ್ ವರ್ಕರನ್ನು ಭೇಟಿಯಾಗಿ ಸದ್ರಿಯವರು ಪ್ರಾಜೆಕ್ಟ ರಿಪೋರ್ಟ ಕೊಟ್ಟಿರುವ ಬಗ್ಗೆ ದಾಖಲಾತಿಯನ್ನು ಅವರಿಗೆ ತೋರಿಸಿರುವುದಾಗಿ, ಸದ್ರಿ ದಾಖಲಾತಿಯನ್ನು ಪರಿಶೀಲಿಸಿದಾಗ ಅವರು 13 ಜನ ಸದಸ್ಯರಿರುವ ಒಂದು ಸಂಘಕ್ಕೆ ಪ್ರೊಜೆಕ್ಟ ರಿಪೋರ್ಟನ್ನು ಮಾಡಿಕೊಟ್ಟಿರುವುದಾಗಿ, ಸದ್ರಿ ರಿಪೋರ್ಟ ನ ಮುಖಪುಟದಲ್ಲಿ 7 ಸಂಘಗಳು ಹೆಸರುಗಳು ಅಂದರೆ ಮಹಿಳೆಯರ ಸ್ವಸಹಾಯ ಸಂಘ ಗೋನೆಹಳ್ಳಿ, ವನದುರ್ಗ ರೈತ ಮಹಿಳೆಯ ಸ್ವಸಹಾಯ ಸಂಘ ಮೂಲೇಕೇರಿ, ಶಾಂತಾ ದುರ್ಗಾ ರೈತಾ ಮಹಿಳೆಯರ ಸ್ವಸಹಾಯ ಸಂಘ ಮೂಲೇಕೇರಿ, ಚೈತನ್ಯ ಸ್ವಸಹಾಯ ಸಂಘ ಬಂಕಿಕೊಡ್ಲ, ಸ್ನೇಹ ಸ್ವಸಹಾಯ ಸಂಘ ಬಾವಿಕೊಡ್ಲ, ದಿವ್ಯಾ ಜ್ಯೋತಿ ಸ್ವಸಹಾಯ ಸಂಘ, ಹೊಸಕೇರಿ, ಸೌಭಾಗ್ಯ ಸ್ವಸಹಾಯ ಸಂಘ ಹಾರುಮಾಸ್ಕೇರಿ, ಇವರು ಹೆಸರು ಮತ್ತು ಸದಸ್ಯರ ಸಂಖ್ಯೆಯನ್ನು ಮುಖಪುಟದಲ್ಲಿ ಪ್ರೂಜೆಕ್ಟ ರಿಪೋರ್ಟನ ಜರಾಕ್ಸ ಪ್ರತಿಯನ್ನು ಸಂಘದ ಹೆಸರಿಗೂ ಇಟ್ಟು ಬುಕ್ ಬೈಂಡ್ ಮಾಡಲಾಗಿರುವುದಾಗಿ, ದಿಃ25-04-2006ರಂದು ನಿಪಿ 22ರ ಪ್ರಕಾರ ಪತ್ರ ಬರೆದು ಅದನ್ನು ದಿಃ26-04-2006 ರಂದು ಖುದ್ದಾಗಿ ಗೋಕರ್ಣ ಪೊಲೀಸರಿಗೆ ಕೊಟ್ಟು ಬಂದಿರುವುದಾಗಿ ನಿಪಿ-22-ಪತ್ರ ಹಾಗೂ ಅದರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನಾದರೂ ಹೇಳಲು ಇಚ್ಛಿಸುವಿರಾ?

ಉತ್ತರಃ ಸುಳ್ಳು

ಪ್ರಶ್ನೆ **32** –ಪ್ರಾ ಸಾ 16 ನಾಗೇಶ ಭಿಕ್ಕು ಪ್ರಭು ಇವರು ತಮ್ಮ ಸಾಕ್ಷ್ಯದಲ್ಲಿ ಅವರಿಗೆ ಜಿಲ್ಲಾ ಪಂಚಾಯತ ಕಾರವಾರದವರು ಹನೇಹಳ್ಳಿ ವಿಎಸ್‌ಎಸ್ ನಲ್ಲಿ ಕೆಲವು

ಚೆಕ್‌ಗಳನ್ನು ಇಸ್ಯು ಮಾಡಿರುವುದಾಗಿ, ಕುಮಟಾ ಸಿಂಡಿಕೇಟ್ ಬ್ಯಾಂಕನಲ್ಲಿ 5 ಚೆಕ್ಕಗಳು ಎನ್‌ಕ್ಯಾಶ್ ಆಗಿದ್ದು, ಅದರ ಬಗ್ಗೆ 2 ಚೆಕ್ಕ ಕ್ಲಿಯರಿಂಗ್‌ನಲ್ಲಿ ಹೋಗಿರುವುದಾಗಿ, 3 ಚೆಕ್ಕಗಳ ಕೌಂಟರ್ ನಲ್ಲಿ ಕ್ಯಾಶ್ ತೆಗೆದುಕೊಂಡಿದ್ದರ ಬಗ್ಗೆ ವರದಿಯನ್ನು ಕೇಳಿರುವುದಾಗಿ, ಅವರು ಪರೀಶಿಲಿಸಿದಾಗ ಬ್ಯಾಂಕಿಂಗ್ ಲಾ ಪ್ರಕಾರ ಯಾವುದೇ ಪ್ರಮಾದ ಕಂಡು ಬಂದಿರುವುದಿಲ್ಲವೆಂದು, ಚೆಕ ಎನ್‌ಕ್ಯಾಶ್ ಮಾಡಿದ ವ್ಯಕ್ತಿ ತನ್ನನ್ನು ಗುರುತಿಸಿ ಎನ್‌ಕ್ಯಾಶ್ ಮಾಡಿರುವುದಾಗಿ, ಸದ್ರಿ ವ್ಯಕ್ತಿಯು ಯಾವತ್ತೂ ಬ್ಯಾಂಕಿನ ವ್ಯವಹಾರ ನಡೆಸುವ ಗ್ರಾಹಕನಾಗಿದ್ದಾಗಿ, ಆ ಬಗ್ಗೆ ಒಂದು ವರದಿಯನ್ನು ಜಿಲ್ಲಾ ಪಂಚಾಯತ್ ಕಾರವಾರಕ್ಕೆ ಕೊಟ್ಟಿರುವುದಾಗಿ, ಮೇ 2006ರಲ್ಲಿ ಕಾರ್ಪೋರೇಟ್ ಕಛೇರಿ ಬೆಂಗಳೂರಿಗೆ ಗೋಕರ್ಣ ಪೊಲೀಸರಿಗೆ ಈ ಬಗ್ಗೆ ಒಂದು ಪತ್ರ ಹೋಗಿರುವುದಾಗಿ, ಅವರು ರಿಜನಲ್ ಹೆಡ್ ಆದ ಕಾರಣ ಅವರಿಗೆ ಸೂಕ್ತ ಕ್ರಮ ತೆಗೆದುಕೊಳ್ಳಿ ಎಂದು ಕಾರವಾರ ಕಚೇರಿಗೆ ಪತ್ರ ಬಂದಿದ್ದಾಗಿ, ಜಿಲ್ಲಾ ಪಂಚಾಯತಿಗೆ ನೀಡಿರುವ ಉತ್ತರವನ್ನೇ ಗೋಕರ್ಣ ಪೊಲೀಸರಿಗೆ ಕೊಟ್ಟಿರುವುದಾಗಿ, ನಿಪಿ 40, ನಿಪಿ 41 ಹಾಗೂ ಅದರಲ್ಲಿರುವ ಅವರ ಸಹಿಯನ್ನು ನೋಡಿ ಗುರುತಿಸಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನಾದರೂ ಹೇಳಲು ಇಚ್ಛಿಸುವಿರಾ?

ಉತ್ತರಃ ಸುಳ್ಳು

ಪ್ರಶ್ನೆ **33** –ಪ್ರಾ ಸಾ 17 ವಸಂತ ವೆಂಕಪ್ಪ ನಾಯ್ಕ ಇವರು ತಮ್ಮ ಸಾಕ್ಷ್ಯದಲ್ಲಿ ಹನೇಹಳ್ಳಿ ಸೇವಾ ಸಹಕಾರಿ ಸಂಘದ ಅವ್ಯವಹಾರದ ಬಗ್ಗೆ ಜಿಲ್ಲಾ ಪಂಚಾಯತನವರು ಮಾಹಿತಿ ಕೋರಿರುವುದಾಗಿ, 3 ಸ್ವಸಹಾಯ ಸಂಘಗಳ ಬಗ್ಗೆ ಮಾಹಿತಿ ಕೊಟ್ಟಿರುವುದಾಗಿ, 3 ಸಂಘಗಳು ಅವರ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಅಸ್ತಿತ್ವದಲ್ಲಿಲ್ಲವೆಂದು ದಿಃ25-04-2006ರಂದು ಗೋಕರ್ಣ ಪೊಲೀಸರಿಗೆ ಲಿಖಿತ ಮಾಹಿತಿ ಪೂರೈಸಿರುವುದಾಗಿ ನಿಪಿ 25-ಪತ್ರ ಹಾಗೂ ಅದರಲ್ಲಿರುವ ಅವರ ಸಹಿಯನ್ನು ನೋಡಿ ಗುರುತಿಸಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನಾದರೂ ಹೇಳಲು ಇಚ್ಛಿಸುವಿರಾ?

ಉತ್ತರಃ ಸುಳ್ಳು

ಪ್ರಶ್ನೆ **34** –ಪ್ರಾ ಸಾ 18 ಜಿ ಅನಂತ ಗಣೇಶ ಹಾವಗೋಡಿ ಇವರು ತಮ್ಮ ಸಾಕ್ಷ್ಯದಲ್ಲಿ ಸದ್ರಿ ಪ್ರಕರಣಕ್ಕೆ ಸಂಬಂಧಿಸಿದಂತೆ ಗೋಕರ್ಣ ಪೊಲೀಸರು ದಿನಾಂಕ 22.4.2006 ರಂದು ಬರೆದ ಪತ್ರದಲ್ಲಿ 15 ಸ್ವಸಹಾಯ ಸಂಘಗಳಿಗೆ 13 ಲಕ್ಷ ರೂಪಾಯಿ ಸಹಾಯಧನ ವಿತರಣೆ ಮಾಡುವ ಸಂಬಂಧ ಅವ್ಯವಹಾರವಾಗಿದ್ದಾಗಿ, ಸದ್ರಿ ವಿಷಯದ ಬಗ್ಗೆ ಅವರ ಪಂಚಾಯತಿ ವ್ಯಾಪ್ತಿಯಲ್ಲಿ ಎಷ್ಟು ಸಂಘಗಳು ಬರುತ್ತವೆ ಮತ್ತು ಅದಕ್ಕೆ ಸಂಬಂಧಪಟ್ಟ ದಾಖಲೆಗಳನ್ನು ಕೊಡುವಂತೆ ಕೇಳಿರುವುದಾಗಿ, ಅದಕ್ಕೆ ಅವರು ದಿಃ26-04-2006ರಂದು 7 ಸ್ವಸಹಾಯ ಸಂಘಗಳು ಅವರ ಗ್ರಾಮ ಪಂಚಾಯತಿ ಅಸ್ತಿತ್ವದಲ್ಲಿ ಇಲ್ಲ ಮತ್ತು ಅವರಿಗೆ ಸಹಾಯಧನ ಕೊಡುವ ಬಗ್ಗೆ ಯಾವುದೇ ಪತ್ರಗಳನ್ನು ಅವರು ಬ್ಯಾಂಕಿಗೆ ಕೊಟ್ಟಿಲ್ಲವೆಂದು ನಿಪಿ.24ರ ಪ್ರಕಾರ ಉತ್ತರವನ್ನು ಕೊಟ್ಟಿರುವುದಾಗಿ, ನಿಪಿ 43-ಪತ್ರ ಮತ್ತು ನಿಪಿ24-ಉತ್ತರ ಹಾಗೂ ಅವುಗಳಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿ, ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನಾದರೂ ಹೇಳಲು ಇಚ್ಛಿಸುವಿರಾ?

ಉತ್ತರಃ ಸುಳ್ಳು

ಪ್ರಶ್ನೆ **35** –ಪ್ರಾ ಸಾ 19 ವಸಂತ ಗಣೇಶ ಹೆಗಡೆ ಇವರು ತಮ್ಮ ಸಾಕ್ಷ್ಯದಲ್ಲಿ 2006ನೇ ಇಸ್ವಿಯಲ್ಲಿ ಗೋಕರ್ಣ ಪೊಲೀಸರು ಹನೇಹಳ್ಳಿ ಗ್ರಾಮಿಣ ವ್ಯವಸಾಯ ಸೇವಾ ಸಹಕಾರಿ ಸಂಘಕ್ಕೆ ಪ್ರಾಜೆಕ್ಟ ರಿಪೋರ್ಟ ಮಾಡಿಕೊಟ್ಟ ಬಗ್ಗೆ ವಿವರಣೆಯನ್ನು ಅವರಿಗೆ ಕೇಳಿರುವುದಾಗಿ, ಅವರು ಲಿಖಿತ ರೂಪದಲ್ಲಿ ಉತ್ತರವನ್ನು ಕೊಟ್ಟಿರುವುದಾಗಿ, ಅವರು ಮೀನುಗಾರಿಕಾ ಸಹಾಯಕ ನಿರ್ದೇಶಕರ ಹುದ್ದೆಯಲ್ಲಿ ಸೇರುವ ಮೊದಲು ಅವರ ಹಿಂದಿನ ಅಧಿಕಾರಿಯ ಅವಧಿಯಲ್ಲಿ ಸದ್ರಿ ಕೆಲಸ ನಡೆದಿದ್ದು, ಅವರು ಈಶ್ವರ

ಹರಿಕಂತ್ರ ಇವರಿಗೆ ಪತ್ರ ಬರೆದು ಕಡತಗಳನ್ನು ಪರಿಶೀಲಿಸಿ ಉತ್ತರ ಕೊಡುವಂತೆ ಪತ್ರ ಬರೆದಿರುವುದಾಗಿ, ನಿಪಿ.44-ಪತ್ರ ಮತ್ತು ನಿಪಿ.20-ಉತ್ತರ, ಹಾಗೂ ಅದರಲ್ಲಿರುವ ತಮ್ಮ ಸಹಿಗಳನ್ನು ನೋಡಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನಾದರೂ ಹೇಳಲು ಇಚ್ಛಿಸುವಿರಾ?

ಉತ್ತರಃ ಸುಳ್ಳು

ಪ್ರಶ್ನೆ **36** –ಪ್ರಾ ಸಾ 20 ಅಶೋಕ ವೆಂಕಪ್ಪ ಮೊರಬ ಇವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕ 20-04-2006ರಂದು ಗೋಕರ್ಣ ಪೊಲೀಸ ಠಾಣೆಯವರು ಹನೆಹಳ್ಳಿ ಗ್ರಾಮೀಣ ವ್ಯವಸಾಯ ಸೇವಾ ಸಹಕಾರಿ ಬ್ಯಾಂಕ್ ನಿಯಮಿತ ಹಣ ದುರುಪಯೋಗ ಆದ ಕಾರಣ 2004-05ಸಾಲಿನ ಇದರ ಲೆಕ್ಕ ಪರಿಶೋಧನಾ ವರದಿಯ ಯಥಾ ನಕಲನ್ನು ಮತ್ತು ಸಹಕಾರಿ ಸಂಘಗಳ ಕಾಯಿದೆ 64ರ ವಿಚಾರಣಾ ವರದಿಯನ್ನು ಕೇಳಿರುವುದಾಗಿ, ದಿನಾಂಕ 15-05-2006ರಂದು ಪತ್ರ ಮುಖೇನ 2004-05ನೇ ಸಾಲಿನ ಲೆಕ್ಕ ಪರಿಶೋಧನಾ ವರದಿಯ ದೃಢೀಕೃತ ನಕಲನ್ನು ಪೂರೈಸಿರುವುದಾಗಿ, ಅವರು ಗೋಕರ್ಣ ಪೊಲೀಸರಿಗೆ ನೀಡಿದ ಪತ್ರ ನಿಪಿ.45 ಮತ್ತು ಲೆಕ್ಕ ಪರಿಶೋಧನಾ ವರದಿ ನಿಪಿ.46 ಹಾಗೂ ಅವುಗಳಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿ ಸಾಕ್ಷ್ಯ ನುಡಿದಿರುತ್ತಾರೆ? ಇದಕ್ಕೆ ನೀವೇನಾದರೂ ಹೇಳಲು ಇಚ್ಛಿಸುವಿರಾ?

ಉತ್ತರಃ ಸುಳ್ಳು

ಪ್ರಶ್ನೆ **37** –ಪ್ರಾ ಸಾ 21 ಸಯ್ಯದ ಅಸಗರ ಇಮಾಮ ಇವರು ತಮ್ಮ ಸಾಕ್ಷ್ಯದಲ್ಲಿ ಅವರು 1981 ರಿಂದ 2014 ರ ತನಕ ಬೆಂಗಳೂರಿನ ವಿಧಿ ವಿಜ್ಞಾನ ಪ್ರಯೋಗಾಲಯದಲ್ಲಿ ಕೈಬರಹ ಮತ್ತು ದಸ್ತಾವೇಜು ತಜ್ಞನಾಗಿ ಕರ್ತವ್ಯ ನಿರ್ವಹಿಸಿರುವುದಾಗಿ, 2007 ರಲ್ಲಿ ಗೋಕರ್ಣ ಪೋಲೀಸ್ ಠಾಣೆಯಿಂದ ದಸ್ತಾವೇಜುಗಳನ್ನು ಅವರ ವಿಧಿ ವಿಜ್ಞಾನ ಪ್ರಯೋಗಾಲಯದಲ್ಲಿ ಸ್ವೀಕರಿಸಿಕೊಂಡಿದ್ದು, ದಿಃ 7.7.2004 ರ ಕುಮಟಾ ತಾಲೂಕು ಪಂಚಾಯತಿ ಕಚೇರಿಯವ ಪತ್ರ ಅದರಲ್ಲಿ ಇರುವ ಪ್ರಶ್ನಿತ ಸಹಿ ಮತ್ತು ಕೈಬರಹಗಳು QS1, QS7ಹಾಗೂ QW1 ನ್ನುನಿಪಿ 7 ಎಂದು, QS8, QS13, QS16, QS17, QS18, QW5 ರಿಂದ QW7 ಗುರುತಿಸಲಾಗಿದ್ದು, ಅದರಲ್ಲಿರುವ ಸಹಿಯನ್ನು ನೋಡಿ ಗುರುತಿಸಿ ಸಾಕ್ಷ್ಯ ನುಡಿದಿರುತ್ತಾರೆ? ಇದಕ್ಕೆ ನೀವೇನಾದರೂ ಹೇಳಲು ಇಚ್ಛಿಸುವಿರಾ?

ಉತ್ತರಃ ಸುಳ್ಳು

ಪ್ರಶ್ನೆ **38** – ಪ್ರಾ ಸಾ 21 ರವರು ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ ಬ್ಯಾಂಕಿನಿಂದ ಧನಸಹಾಯ ಬಿಡುಗಡೆಯಾಗಿರುವ ಬಗ್ಗೆ ಸ್ಟೇಟಮೆಂಟ್ ದಾಖಲಾತಿ ಇದ್ದು ಅರದಲ್ಲಿ ಪ್ರಶ್ನಿತ ಸಹಿ ಹಾಗೂ ಕೈಬರಹಗಳನ್ನು QS2, QS9, QS14, QW 2, QS3, QS10, QS15, QW3, QS4, QS11, QW4 ದಾಖಲಾತಿಯನ್ನು ಕುಮಟಾ ಸಿಂಡಿಕೇಟ್ ಬ್ಯಾಂಕನ ದಿನಾಂಕ 7.7.2004 ರ ರೂ.13,00,000/- ಮೊತ್ತ ನಮೂದು ಮಾಡಿರುವ ಚೆಕ್ ನಂ. 756368 ಅದರಲ್ಲಿ ಇರುವ ಪ್ರಶ್ನಿತ ಸಹಿಗಳು QS5, QS6, QS12 ಹಾಗೂ QS19 ದಾಖಲಾತಿಗಳನ್ನು ಹಾಗೂ ಅದರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿ ಸಾಕ್ಷ್ಯ ನುಡಿದಿರುತ್ತಾರೆ? ಇದಕ್ಕೆ ನೀವೇನಾದರೂ ಹೇಳಲು ಇಚ್ಛಿಸುವಿರಾ?

ಉತ್ತರಃ ಸುಳ್ಳು

ಪ್ರಶ್ನೆ **39** – ಪ್ರಾ ಸಾ 21 ರವರು ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ ಸುಮಾರು 21 ದಾಖಲೆಗಳಲ್ಲಿ 1ನೇ ಆರೋಪಿಯಾದ ನಿಮ್ಮ ಒಪ್ಪಿತ ಮತ್ತು ಮಾದರಿ ಕೈಬರಹ ಮತ್ತು ಸಹಿಗಳನ್ನು SW1 ರಿಂದ SW4, RW1 ರಿಂದ RW 16, SS1 ರಿಂದ SS4, RS1 ರಿಂದ RS45 ಎಂದು ಗುರುತಿಸಿರುವುದಾಗಿ, ಸುಮಾರು 19 ದಾಖಲೆಗಳಲ್ಲಿ 3ನೇ ಆರೋಪಿಯಾದ ನಿಮ್ಮ ಒಪ್ಪಿತ ಮತ್ತು ಮಾದರಿ ಕೈಬರಹ ಮತ್ತು ಸಹಿಗಳನ್ನು SW5, RW1a ರಿಂದ RW6a, SS5, RS1a ರಿಂದ RS54a, RS55a ರಿಂದ RS90aಎಂದು ಗುರುತಿಸಿರುವುದಾಗಿ, ಸುಮಾರು 6 ದಾಖಲೆಗಳಲ್ಲಿ 2ನೇ ಆರೋಪಿಯಾದ ನಿಮ್ಮ

ಒಪ್ಪಿತ ಮತ್ತು ಮಾದರಿ ಕೈಬರಹ ಮತ್ತು ಸಹಿಗಳನ್ನು SS6, RS1b ರಿಂದ RS40b ಎಂದು ಗುರುತಿಸಿರುವುದಾಗಿ, ಸುಮಾರು 9 ದಾಖಲೆಗಳಲ್ಲಿ ಮೃತ 4ನೇ ಆರೋಪಿಯ ಒಪ್ಪಿತ ಮತ್ತು ಮಾದರಿ ಕೈಬರಹ ಮತ್ತು ಸಹಿಗಳನ್ನು SW6, RW1b ರಿಂದ RW6b, SS7, RS1c ರಿಂದ RS36c ಎಂದು ಗುರುತಿಸಿರುವುದಾಗಿ, ಸಾಕ್ಷ್ಯ ನುಡಿದಿರುತ್ತಾರೆ? ಇದಕ್ಕೆ ನೀವೇನಾದರೂ ಹೇಳಲು ಇಚ್ಛಿಸುವಿರಾ?

ಉತ್ತರ: ಸುಳ್ಳು

ಪ್ರಶ್ನೆ **40** – ಪ್ರಾ ಸಾ 21 ರವರು ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ ಸದ್ರಿ ಒಪ್ಪಿತ ಮತ್ತು ಮಾದರಿ ಹಾಗೂ ಪ್ರಶ್ನಿತ ಕೈಬರಹ ಮತ್ತು ಸಹಿಗಳನ್ನು ವೈಜ್ಞಾನಿಕವಾಗಿ ಪರೀಕ್ಷಿಸಿ ಅವರು SS1 ರಿಂದ SS4, RS1 ರಿಂದ R45ಮತ್ತು SW1 ರಿಂದ SW4, RW 1 ರಿಂದ RW16 ಎಂದು ಗುರುತಿಸಿರುವ ಒಪ್ಪಿತ ಹಾಗೂ ಮಾದರಿ ಸಹಿ ಮತ್ತು ಕೈಬರಹಗಳನ್ನು ಬರೆದಿರುವ ವ್ಯಕ್ತಿಯೇ QS1 ರಿಂದ QS6, QW1 ರಿಂದ QW4 ಎಂದು ಗುರುತಿಸಿರುವ ಪ್ರಶ್ನಿತ ಸಹಿ ಮತ್ತು ಕೈಬರಹವನ್ನು ಬರೆದಿರುವುದಾಗಿ, SS5, RS1a ರಿಂದ RS54a, RS55a ರಿಂದ RS90a ಮತ್ತು SW5, RW1a ರಿಂದ RW6a ಎಂದು ಗುರುತಿಸಿರುವ ಒಪ್ಪಿತ ಹಾಗೂ ಮಾದರಿ ಸಹಿ ಮತ್ತು ಕೈಬರಹಗಳನ್ನು ಬರೆದಿರುವ ವ್ಯಕ್ತಿಯೇ QS7 ರಿಂದ QS15, QW7 ಎಂದು ಗುರುತಿಸಿರುವ ಪ್ರಶ್ನಿತ ಸಹಿ ಮತ್ತು ಕೈಬರಹವನುನ ಬರೆದಿರುವುದಾಗಿ ಅಭಿಪ್ರಾಯ ನೀಡಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನಾದರೂ ಹೇಳಲು ಇಚ್ಛಿಸುವಿರಾ?

ಉತ್ತರ: ಸುಳ್ಳು

ಪ್ರಶ್ನೆ **41** – ಪ್ರಾ ಸಾ 21 ರವರು ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ SS6, RS1b ರಿಂದ RS40b ಎಂದು ಗುರುತಿಸಿರುವ ಒಪ್ಪಿತ ಹಾಗೂ ಮಾದರಿ ಸಹಿಗಳನ್ನು ಬರೆದಿರುವ ವ್ಯಕ್ತಿಯೇ QS16 ಎಂದು ಗುರುತಿಸಿರುವ ಪ್ರಶ್ನಿತ ಸಹಿ ಮತ್ತು ಕೈಬರಹವನ್ನು ಬರೆದಿರುವುದಾಗಿ, SS7, RS1c ರಿಂದ RS36c ಮತ್ತು SW6, RW1b ರಿಂದ RW6b ಎಂದು ಗುರುತಿಸಿರುವ ಒಪ್ಪಿತ ಹಾಗೂ ಮಾದರಿ ಸಹಿಗಳನ್ನು ಬರೆದಿರುವ ವ್ಯಕ್ತಿಯೇ QS17 ರಿಂದ QS19, QW5, QW6 ಎಂದು ಗುರುತಿಸಿರುವ ಪ್ರಶ್ನಿತ ಸಹಿ ಮತ್ತು ಕೈಬರಹವನ್ನು ಬರೆದಿರುವುದಾಗಿ, ಅಭಿಪ್ರಾಯ ನೀಡಿದ್ದು, ಆ ಬಗ್ಗೆ ಅವರು ಸವಿವರ ಅಭಿಪ್ರಾಯ ವರದಿಯನ್ನು ನೀಡಿ ವಿಸ್ತೃತ ಪ್ರಿಂಟಗಳನ್ನು ಲಗತ್ತಿಸಿರುವುದಾಗಿ, ನಿಪಿ 47 ವರದಿಯಲ್ಲಿ ಅವರು ಆರೋಪಿತರಾದ ನಿಮಗೆ ಸಂಬಂಧಿಸಿದೆ ಎನ್ನಲಾದ ಒಪ್ಪಿತ ಮತ್ತು ಮಾದರಿ ಸಹಿಗಳ ವಿಸ್ತೃತ ಪ್ರಿಂಟಗಳನ್ನು ಲಗತ್ತಿಸಿರುವುದಾಗಿ, ನಿಪಿ47 ವರದಿಯನ್ನು ಹಾಗೂ ಅದರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿ, ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನಾದರೂ ಹೇಳಲು ಇಚ್ಛಿಸುವಿರಾ?

ಉತ್ತರ: ಸುಳ್ಳು

ಪ್ರಶ್ನೆ **42** – ಪ್ರಾ ಸಾ 22 ಅಂತೋನಿ ಜಾನ್ ಜೆ ಕೆ ಇವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕ: 10-09-2006 ರಂದು ಪ್ರಕರಣದ ಕಡತವನ್ನು ಚಾ.ಸಾ.1ರವರಿಂದ ಪಡೆದುಕೊಂಡು ತನಿಖೆಯನ್ನು ಮುಂದುವರೆಸಿ, ದಿನಾಂಕ 13-09-2006 ರಂದು ತಾಲೂಕು ಪಂಚಾಯತ, ಕುಮಟಾ ಇವರಿಂದ 1ನೇ ಆರೋಪಿಯಾದ ನೀವು ಹಣವನ್ನು ದುರುಪಯೋಗಪಡಿಸಿಕೊಂಡ ಬಗ್ಗೆ ಪತ್ರವನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುದಾಗಿ, ಅದೇ ದಿನ ಕಾರವಾರದ ಜಿಲ್ಲಾ ಪಂಚಾಯತರವರಿಂದ ಲೆಕ್ಕಪರಿಶೋಧನಾ ವರದಿ ಮತ್ತು ಅಪರಾಧಕ್ಕೆ ಸಂಬಂಧಪಟ್ಟ ಮಾಹಿತಿಯನ್ನು ಪೂರೈಸುವಂತೆ ಹಾಗೂ ಕಾರ್ಯನಿರ್ವಹಣಾಧಿಕಾರಿಗಳು, ತಾಲೂಕು ಪಂಚಾಯತಿ, ಕುಮಟಾ ಇವರಿಗೆ 2ನೇ ಆರೋಪಿಯಾದ ನೀವು ಅಮಾನತ್ತುಗೊಂಡಿರುವ ಬಗ್ಗೆ ಹಾಗೂ ಅವರು ಶ್ರೀಧರ ಭಟ್ಟ ಎನ್ನುವವರಿಗೆ ಪ್ರಭಾರ ವಹಿಸಿದ ಬಗ್ಗೆ, ದಾಖಲಾತಿಯನ್ನು ಪೂರೈಸುವಂತೆ

ಮನವಿಯನ್ನು ಸಲ್ಲಿಸಿರುವುದಾಗಿ, ಮಾನ್ಯ ಸಹಾಯಕ ನಿಬಂಧಕರು, ಪತ್ತಿನ ಸಹಕಾರಿ ಸಂಘ, ಕುಮಟಾ ಇವರಿಗೆ 2004-05 ನೇ ಸಾಲಿನಲ್ಲಿ ಕುಮಟಾ ತಾಲೂಕು ಪಂಚಾಯತಿಯಲ್ಲಿ ಸದ್ರಿ ಪ್ರಕರಣಕ್ಕೆ ಸಂಬಂಧಪಟ್ಟಂತೆ ಲೆಕ್ಕಪರಿಶೋಧನಾ ವರದಿ ಮತ್ತು ಇಲಾಖಾ ವಿಚಾರಣಾ ವರದಿಯನ್ನು ನೀಡುವಂತೆ ಮನವಿಯನ್ನು ಸಲ್ಲಿಸಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನಾದರೂ ಹೇಳಲು ಇಚ್ಛಿಸುವಿರಾ?

ಉತ್ತರಃ ಸುಳ್ಳು

ಪ್ರಶ್ನೆ **43–** ಪ್ರಾ ಸಾ 22 ರವರು ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ ದಿನಾಂಕ 30-10-2006 ರಂದು 2004-05 ನೇ ಸಾಲಿನಲ್ಲಿ ಕುಮಟಾ ತಾಲೂಕು ಪಂಚಾಯತಿಯಲ್ಲಿ ಲೆಕ್ಕಪರಿಶೋಧನೆ ಮಾಡಿದ ಬಗ್ಗೆ ವರದಿಯನ್ನು ನೀಡುವಂತೆ ಮಾನ್ಯ ಸಹಾಯಕ ಲೆಕ್ಕಾಧಿಕಾರಿಗಳು, ಧಾರವಾಡ ಇವರಿಗೆ ಮನವಿಯನ್ನು ಸಲ್ಲಿಸಿದ್ದಾಗಿ, ದಿನಾಂಕ 29-11-2006 ರಂದು 2004-05 ನೇ ಸಾಲಿನ ಲೆಕ್ಕಪರಿಶೋಧನಾ ವರದಿಯನ್ನು ಪೂರೈಸುವಂತೆ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿಗಳು, ಜಿಲ್ಲಾ ಪಂಚಾಯತಿ, ಕಾರವಾರ ಮತ್ತು ಮಾನ್ಯ ಸಹಾಯಕ ಲೆಕ್ಕಾಧಿಕಾರಿಗಳು, ಧಾರವಾಡ ಇವರಿಗೆ ಮನವಿಯನ್ನು ಹಾಗೂ ದಿನಾಂಕ 30-12-2006 ರಂದು 2004-05 ನೇ ಸಾಲಿನ ಲೆಕ್ಕಪರಿಶೋಧನಾ ವರದಿಯನ್ನು ನೀಡುವಂತೆ ಕುಮಟಾ ತಾಲೂಕು ಪಂಚಾಯತಿ ಮತ್ತು ಜಿಲ್ಲಾ ಪಂಚಾಯತ್ ಕಾರವಾರರವರಿಗೆ ಪತ್ರವನ್ನು ಬರೆದಿರುವುದಾಗಿ, ಸಹಾಯಕ ಲೆಕ್ಕಾಧಿಕಾರಿಗಳು, ಧಾರವಾಡ ಇವರಿಗೆ ಪೊಲೀಸ್ ಅಧೀಕ್ಷಕರ ಮುಖೇನ ಲೆಕ್ಕಪರಿಶೋಧನಾ ವರದಿಯನ್ನು ನೀಡುವಂತೆ ಕೋರಿ ಮನವಿಯನ್ನು ಸಲ್ಲಿಸಿರುವುದಾಗಿ, ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನಾದರೂ ಹೇಳಲು ಇಚ್ಛಿಸುವಿರಾ?

ಉತ್ತರಃ ಸುಳ್ಳು

ಪ್ರಶ್ನೆ **44 –** ಪ್ರಾ ಸಾ 22 ರವರು ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ ದಿಃ 03-01-2007 ರಂದು ತಾಲೂಕು ಪಂಚಾಯತಿ, ಕುಮಟಾರವರು 2004-05 ನೇ ಸಾಲಿನಲ್ಲಿ ಜಿಲ್ಲಾಪಂಚಾಯತಿಯ ವಿಶೇಷ ಲೆಕ್ಕಪರಿಶೋಧಕಾರ ತಂಡ ನಡೆಸಿದಂತಹ ಲೆಕ್ಕಪರಿಶೋಧನಾ ವರದಿಯ ಪ್ರತಿಯನ್ನು ಹಾಜರುಪಡಿಸಿದ್ದಾಗಿ, ದಿಃ 18-01-2007 ರಂದು 1, 2 ಮತ್ತು 4ನೇ ಆರೋಪಿತರಾದ ನಿಮಗೆ ವಿಚಾರಣೆಗೆ ಹಾಜರಾಗುವಂತೆ ತಿಳುವಳಿಕೆ ಪತ್ರವನ್ನು ನೀಡಿರುವುದಾಗಿ, ದಿನಾಂಕ 19-01-2007 ರಂದು ಕಾರ್ಯನಿರ್ವಹಣಾಧಿಕಾರಿಗಳು, ತಾಲೂಕು ಪಂಚಾಯತಿ, ಕುಮಟಾ ಇವರಿಗೆ 2004-05 ನೇ ಸಾಲಿನ 2 ರಿಂದ 4ನೇ ಆರೋಪಿತರಾದ ನಿಮ್ಮ ಮಾದರಿ ಬರವಣಿಗೆ ಹಾಗೂ ಸಹಿಗಳು ಇರುವಂತಹ ದಾಖಲಾತಿಯನ್ನು ಒದಗಿಸುವಂತೆ ಮನವಿಯನ್ನು ಸಲ್ಲಿಸಿದ್ದಾಗಿ, ವ್ಯವಸ್ಥಾಪಕರು, ಗ್ರಾಮೀಣ ವ್ಯವಸಾಯ ಸೇವಾ ಸಹಕಾರಿ ಸಂಘ ಹನೇಹಳ್ಳಿ, ಇವರಿಗೆ 2 ರಿಂದ 4ನೇ ಆರೋಪಿತರಾದ ನಿಮ್ಮ 2004-05 ನೇ ಸಾಲಿನ ಮಾದರಿ ಬರವಣಿಗೆ ಹಾಗೂ ಸಹಿ ಇರುವಂತಹ ದಾಖಲಾತಿಗಳನ್ನು ಒದಗಿಸುವಂತೆ ಮನವಿಯನ್ನು ನೀಡಿದ್ದಾಗಿ, ಕಾರ್ಯನಿರ್ವಹಣಾಧಿಕಾರಿಗಳು, ತಾಲೂಕು ಪಂಚಾಯತಿ, ಕುಮಟಾ ಇವರಿಗೆ 3ನೇ ಆರೋಪಿಯಾದ ನಿಮ್ಮ ನೇಮಕಾತಿಯ ಆದೇಶದ ಪ್ರತಿ, 2004-05 ನೇ ಸಾಲಿನ ಲೆಕ್ಕಪರಿಶೋಧನಾ ವರದಿಯ ಪ್ರತಿ ಮತ್ತು ಇಲಾಖಾ ವಿಚಾರಣಾ ವರದಿಯ ಪ್ರತಿಯನ್ನು ಪೂರೈಸುವಂತೆ ಪತ್ರವನ್ನು ಬರೆದಿರುವುದಾಗಿ, ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನಾದರೂ ಹೇಳಲು ಇಚ್ಛಿಸುವಿರಾ?

ಉತ್ತರಃ ಸುಳ್ಳು

ಪ್ರಶ್ನೆ **45 –** ಪ್ರಾ ಸಾ 22 ರವರು ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ ದಿನಾಂಕ 25-01-2007 ರಂದು ತಾಲೂಕು ಪಂಚಾಯತ ಕಾರ್ಯಾಲಯ ಕುಮಟಾ ಇವರು 2004-05 ನೇ ಸಾಲಿನ 2 ರಿಂದ 4ನೇ ಆರೋಪಿತರಾದ ನಿಮ್ಮ ಮಾದರಿ ಸಹಿಗಳು ಮತ್ತು ಬರವಣಿಗೆ ಇರುವಂತಹ ದಾಖಲಾತಿಯನ್ನು ಹಾಜರುಪಡಿಸಿದ ಮೇರೆಗೆ ಅವುಗಳನ್ನು ವಶಕ್ಕೆ ಪಡೆದುಕೊಂಡು, ಠಾಣಾ ಮಾಲುಪಟ್ಟಿ ಸಂಖ್ಯೆ 4/25-01-2007 ರಲ್ಲಿ ನಮೂದಿಸಿ ಮಾನ್ಯ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿದ್ದಾಗಿ, ದಿನಾಂಕ 26-01-2007 ರಂದು 1, 2 ಮತ್ತು 4ನೇ ಆರೋಪಿತರಾದ ನಿಮ್ಮ ಮಾದರಿ ಸಹಿಗಳನ್ನು ಪಂಚನಾಮೆಯ ಮೂಲಕ ಪಡೆದುಕೊಂಡು, ಸದರಿ ಮಾದರಿ ಸಹಿಗಳನ್ನು ಸ್ವತ್ತು ಪಟ್ಟಿ ಸಂಖ್ಯೆ 5/26-01-2007 ರಲ್ಲಿ ನಮೂದಿಸಿ ಮಾನ್ಯ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುವುದಾಗಿ, ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನಾದರೂ ಹೇಳಲು ಇಚ್ಛಿಸುವಿರಾ?

ಉತ್ತರಃ ಸುಳ್ಳು

ಪ್ರಶ್ನೆ **46 –** ಪ್ರಾ ಸಾ 22 ರವರು ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ ದಿನಾಂಕ 02-02-2007 ರಂದು ವ್ಯವಸ್ಥಾಪಕರು, ಗ್ರಾಮೀಣ ಸೇವಾ ವ್ಯವಸಾಯ ಸೇವಾ ಸಹಕಾರಿ ನಿಯಮಿತ ಹನೇಹಳ್ಳಿ ಇವರು ತಮ್ಮ ಪತ್ರದೊಂದಿಗೆ 1ನೇ ಆರೋಪಿಯಾದ ನಿಮ್ಮ ರಜಾ ಅರ್ಜಿ, ಸಹಿ ಇರುವ ಕಾಗದಪತ್ರಗಳನ್ನು ಟಪಾಲಿನ ಮೂಲಕ ಕಳುಹಿಸಿಕೊಟ್ಟಿದ್ದು, ಅವುಗಳನ್ನು ಸ್ವೀಕರಿಸಿ, ಸ್ವತ್ತು ಪಟ್ಟಿ ಸಂಖ್ಯೆ 6/02-02-2007 ರಲ್ಲಿ ನಮೂದಿಸಿ ಮಾನ್ಯ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿದ್ದಾಗಿ, ದಿನಾಂಕ 04-04-2007 ರಂದು ತಾಲೂಕು ಪಂಚಾಯತ್, ಕುಮಟಾ ಇವರಿಂದ 3ನೇ ಆರೋಪಿಯಾದ ನಿಮ್ಮ ಇಲಾಖಾ ವಿಚಾರಣೆಗೆ ಸಂಬಂಧಪಟ್ಟಂತೆ ದಾಖಲಾತಿಯನ್ನು ಸ್ವೀಕರಿಸಿಕೊಂಡು ಕಡತಕ್ಕೆ ಅಳವಡಿಸಿಕೊಂಡಿರುವುದಾಗಿ, ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನಾದರೂ ಹೇಳಲು ಇಚ್ಛಿಸುವಿರಾ?

ಉತ್ತರಃ ಸುಳ್ಳು

ಪ್ರಶ್ನೆ **47 –** ಪ್ರಾ ಸಾ 23ರಾಘವೇಂದ್ರ ಎಸ್ ಇವರು ತಮ್ಮ ಸಾಕ್ಷ್ಯದಲ್ಲಿ ದಿಃ 10-07-2007ರಂದು ಪ್ರಕರಣದ ಕಡತವನ್ನು ಚಾ.ಸಾ.22 ರವರಿಂದ ಪಡೆದುಕೊಂಡು ತನಿಖೆಯನ್ನು ಮುಂದುವರೆಸಿ, ದಿಃ 28-07-2007 ರಂದು 3ನೇ ಆರೋಪಿಯಾದ ನೀವು ಮಾನ್ಯ ಉಚ್ಚ ನ್ಯಾಯಾಲಯ, ಕರ್ನಾಟಕದಿಂದ ನಿರೀಕ್ಷಣಾ ಜಾಮೀನನ್ನು ಪಡೆದುಕೊಂಡು ಠಾಣೆಗೆ ಹಾಜರಾದ ಮೇರೆಗೆ ನಿಮ್ಮನ್ನು ದಸ್ತಗಿರಿ ಮಾಡಿ, ದಸ್ತಗಿರಿ ಕ್ರಮಗಳನ್ನು ಅನುಸರಿಸಿ ಸೂಕ್ತ ಜಾಮೀನಿನ ಮೇರೆಗೆ ಬಿಡುಗಡೆ ಮಾಡಿರುವುದಾಗಿ, 3ನೇ ಆರೋಪಿಯಾದ ನಿಮ್ಮ ಮಾದರಿ ಸಹಿ ಹಾಗೂ ಮಾದರಿ ಬರವಣಿಗೆಯನ್ನು ನೀಡುವಂತೆ ತಿಳುವಳಿಕೆ ಪತ್ರವನ್ನು ನೀಡಿ, ನಿಮ್ಮಿಂದ ಮಾದರಿ ಸಹಿ ಹಾಗೂ ಬರವಣಿಗೆಯನ್ನು ಪಡೆದುಕೊಂಡಿರುವುದಾಗಿ ದಿಃ 28-08-2007 ರಂದು ಆರೋಪಿತರಾದ ನಿಮ್ಮಿಂದ ಪಡೆದಂತಹ ಮಾದರಿ ಸಹಿ ಮತ್ತು ಬರವಣಿಗೆಗಳನ್ನು ತಜ್ಞರ ಪರೀಕ್ಷೆಗಾಗಿ ಪ್ರಯೋಗಾಲಯಕ್ಕೆ ಕಳುಹಿಸಿಕೊಟ್ಟಿರುವುದಾಗಿ, 3ನೇ ಆರೋಪಿಯಾದ ನಿಮ್ಮನ್ನು ನೋಡಿ ಗುರುತಿಸಿ, ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನಾದರೂ ಹೇಳಲು ಇಚ್ಛಿಸುವಿರಾ?

ಉತ್ತರಃ ಸುಳ್ಳು

ಪ್ರಶ್ನೆ **48 –** ಪ್ರಾ ಸಾ 24 ರಘುಪತಿ ಎಸ್ ಎಂ ಇವರು ತಮ್ಮ ಸಾಕ್ಷ್ಯದಲ್ಲಿ ದಿಃ 09-04-2008ರಂದು ಪ್ರಕರಣದ ಕಡತವನ್ನು ಚಾ.ಸಾ.25 ರವರಿಂದ ಪಡೆದುಕೊಂಡು ತನಿಖೆಯನ್ನು ಮುಂದುವರೆಸಿ, ಡಿ.ಎಸ್.ಪಿ. ಭಟ್ಕಳ ಇವರು ದಿಃ25-07-2008 ರಂದು ನೀಡಿದಂತಹ ವಿಧಿ ವಿಜ್ಞಾನ ಪ್ರಯೋಗಾಲಯದ ವರದಿಯನ್ನು ಸ್ವೀಕರಿಸಿಕೊಂಡು

ಕಡತಕ್ಕೆ ಅಳವಡಿಸಿಕೊಂಡಿದ್ದಾಗಿ, ತನಿಖೆಯು ಪೂರ್ಣಗೊಂಡ ಮೇರೆಗೆ ಆರೋಪಿತರಾದ ನಿಮ್ಮ ವಿರುದ್ಧ ಅಂತಿಮ ವರದಿಯನ್ನು ಸಲ್ಲಿಸಿರುವುದಾಗಿ, ನಂತರ ದಿನಾಂಕಃ 26-03-2012 ರಂದು ಪ್ರಕರಣದಲ್ಲಿನ ಚೆಕ್‌ನ ಸಂಖ್ಯೆ ಕಣ್‌ತಪ್ಪಿನಿಂದ ವ್ಯತ್ಯಾಸವಾಗಿ ನಮೂದಾಗಿರುವುದು ಕಂಡುಬಂದ ಮೇರೆಗೆ ಅದನ್ನು ಸರಿಪಡಿಸಿಕೊಳ್ಳಲು ಅನುಮತಿ ನೀಡುವಂತೆ ಮಾನ್ಯ ನ್ಯಾಯಾಲಯಕ್ಕೆ ಮನವಿಪತ್ರವನ್ನು ಸಲ್ಲಿಸಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನಾದರೂ ಹೇಳಲು ಇಚ್ಛಿಸುವಿರಾ?

ಉತ್ತರಃ ಸುಳ್ಳು

ಪ್ರಶ್ನೆ **49 -** ನಿಮ್ಮ ಪರವಾಗಿ ಏನಾದರೂ ಸಾಕ್ಷಿ ವಿಚಾರಣೆ ಇದೆಯಾ?

ಉತ್ತರಃ ಇಲ್ಲ

ಪ್ರಶ್ನೆ **50-** ಈ ಪ್ರಕರಣದ ಕುರಿತು ನೀವು ಏನನ್ನಾದರೂ ಹೇಳುವುದು ಇದೆಯಾ?

ಉತ್ತರಃ ಚೆಕ್‌ಗೂ, ನನಗೂ ಸಂಬಂಧ ಇಲ್ಲ. ಚೆಕ್‌ನಲ್ಲಿ ಇರುವ ಸಹಿ ನನ್ನದಲ್ಲ

(ಮೇಲಿನ ಎಲ್ಲಾ ಪ್ರಶ್ನೆಗಳನ್ನು ಆರೋಪಿಗೆ ತೆರೆದ ನ್ಯಾಯಾಲಯದಲ್ಲಿ ಓದಿ ತಿಳಿಸಿ ಕೇಳಿದಾಗ ಆರೋಪಿ ಅವುಗಳನ್ನು ತಿಳಿದುಕೊಂಡು ಉತ್ತರಿಸಿದ್ದು,ಅಂತಹ ಉತ್ತರಗಳನ್ನು ಪ್ರತಿ ಪ್ರಶ್ನೆಗಳನ್ನು ಕನ್ನಡದಲ್ಲಿಯೇ ನಮೂದಿಸಿ ಈ ಮೂಲಕ ದೃಢಿಕರಿಸಿದೆ)

22/12/22 22/12/22

ದಿಃ ~~13.4.2022~~ **ಹೆಚ್ಚುವರಿ ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ.**

**ಕುಮಟಾ.**